# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038




HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201




ಸಂಪುಟ:02 Volume:02 • ಸಂಚಿಕೆ: 54 Issue: 54 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 22.08.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಶ್ರೀರಾಘವೇಂದ್ರರ 353 ನೇ ಮಧ್ಯಾರಾಧನೆ

## ಶಾಖಾ ಮಠಗಳಲ್ಲಿ ಬೆಳಿಗ್ಗೆ ವಿಶೇಷವಾಗಿ ಫಲಪಂಚಾಮೃತಾಭಿಷೇಕ, ರಾಯರ ಬೃಂದಾವನಗಳಿಗೆ ರಜತ, ರೇಷ್ಮೆ ಹಾಗೂ ವಿಶೇಷ ವಿವಿಧ ಹೂವುಗಳಿಂದ ಅಲಂಕಾರ





**ಹಂಪಿ ಟೈಮ್ಸ್ ಹೊಸಪೇಟೆ**

ನಗರ ಸೇರಿದಂತೆ ಜಿಲ್ಲಾದ್ಯಂತ ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿಗಳ 353 ನೇ ಮಧ್ಯಾರಾಧನೆ ನಿಮಿತ್ತ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ನಗರದ ನಂಜನಗೂಡು ರಾಣಿಪೇಟೆ, ಗಾಂಧಿಕಾಲೋನಿ, ಶ್ರೀಕಾಶಿ ಆಂಜನೇಯ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಶಾಖಾ ಮಠಗಳಲ್ಲಿ ಬೆಳಿಗ್ಗೆ ವಿಶೇಷವಾಗಿ ಫಲಪಂಚಾಮೃತಾಭಿಷೇಕ, ರಾಯರ ಬೃಂದಾವನಗಳಿಗೆ ರಜತ, ರೇಷ್ಮೆ ಹಾಗೂ ವಿಶೇಷ ವಿವಿಧ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು.

ಉತ್ಸವ ಮೂರ್ತಿಗೆ ಕನಕಾಭಿಷೇಕ, ಸರ್ವಸೇವೆ, ಮಹಾಪೂಜೆ ಬಳಿಕ ಹಸ್ತೋದಕ, ನೇವೈದ್ಯ, ಮಹಾಮಂಗಳರಾತಿ ಜರುಗಿತು. ಬಳಿಕ ಅಲಂಕಾರ ಬ್ರಾಹ್ಮಣರ ಸಂತರ್ಪಣೆ ಹಾಗೂ ಬಂದ ಭಕ್ತರಿಗೆ ಅನ್ನದಾನ ಜರುಗಿತು.

ಶ್ರೀಮಠದ ಆವರಣದಲ್ಲಿ ಸಾಮೂಹಿಕ ಭಜನೆ, ಅಷ್ಟೋತ್ತರ ಪಾರಾಯಣ, ಕೋಲಾಟ, ನೃತ್ಯ ಪ್ರದರ್ಶನ ನಡೆಯಿತು. ಶ್ರೀಮಠದ ವಿಭಾಗೀಯ ವ್ಯವಸ್ಥಾಪಕ ಗುರುರಾಜ್ ದಿಗ್ಗಾವಿ, ಶಾಖಾ ವ್ಯವಸ್ಥಾಪಕರಾದ ಕೃಷ್ಣಮೂರ್ತಿ, ಟೀಕಾಚಾರ್ಯ ಗುಂಜಳ್ಳಿ, ಅನಂತ ಪದ್ಮನಾಭ, ಶಿರೆಕೊಳ್ಳ ಗುರುರಾಜ್ ಇತರರಿದ್ದರು.

ಹೊಸಪೇಟೆ ನಗರದ ವಿಜಯಾ ಚಿತ್ರಮಂದಿರ ಸಮೀಪದ ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿ ರಾಯರ ಬೃಂದಾವನಕ್ಕೆ ಬೆಳಿಗ್ಗೆ ಅಷ್ಟೋತ್ತರ ಪಾರಾಯಣ, ವಿಷ್ಣು ಸಹಸ್ರ ನಾಮ ಪಠದೊಂದಿಗೆ ಹಾಲಿನ ಅಭಿಷೇಕ, ಪಂಚಾಮೃತಾಭಿಷೇಕ, ಅರ್ಚನೆ, ಕನಕಾಭಿಷೇಕ, ಸರ್ವಸೇವೆ ನಡೆಯಿತು. ಪುಷ್ಪಾರ್ಚನೆ, ಹಸ್ತೋದಕ ಮಹಾಮಂಗಳರಾತಿ ಜರುಗಿತು. ಬಂದ ಭಕ್ತರಿಗೆ ಅನ್ನದಾನ ನಡೆಯಿತು. ಮಠಾಧಿಕಾರಿ ಭೀಮಸೇನಾರ್ಚಾ, ಪವಾನಾರ್ಚ, ಪ್ರಹ್ಲಾದಾಚಾರ್ಯ ಇತರರಿದ್ದರು.

# ಹೆಚ್ ಡಿ. ಕುಮಾರಸ್ವಾಮಿ ಹೆದರಿದ್ದಾರೆ, ಪರಿಸ್ಥಿತಿ ಬಂದ್ರೆ ಬಂಧಿಸ್ತೀವಿ: ಸಿಎಂ



**ಹಂಪಿ ಟೈಮ್ಸ್ ಕೊಪ್ಪಳ**

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪ್ರಕರಣದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯಪಾಲರು, ತನ್ನ ವಿರುದ್ಧ ಮಾತ್ರ ಯಾವುದೇ ತನಿಖಾ ವರದಿಯನ್ನು ಆಧರಿಸದೇ ಪ್ರಾಸಿಕ್ಯೂಷನ್‌ಗೆ ಅನುಮತಿ ಅನುಮತಿ ನೀಡಿದ್ದಾರೆ. ಇದು ತಾರತಮ್ಯವಲ್ಲವೇ ಎಂದು ಮುಖ್ಯಮಂತ್ರಿಗಳು ಖಾರವಾಗಿ ಪ್ರಶ್ನಿಸಿದರು.

ಅವರು ಬುಧವಾರ ಗಿಣಿಗೇರ ಏರ್‌ಸ್ಟ್ರಿಪ್ ಕೊಪ್ಪಳದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸುವ ಬಗ್ಗೆಯೇ ಮುಖ್ಯಮಂತ್ರಿಗಳು ಯೋಚಿಸುತ್ತಿದ್ದಾರೆ ಎಂಬ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡುತ್ತಾ, ಕುಮಾರಸ್ವಾಮಿಯವರನ್ನು ಬಂಧಿಸುವ ಅಗತ್ಯಬಿದ್ದರೆ ಮುಲಾಜಿಲ್ಲದೆ ಬಂದಿಸ್ತೀವಿ. ಆದರೆ ಈಗ ಇನ್ನೂ ಬಂಧಿಸುವ ಸನಗನಿವೇಶ ಬಂದಿಲ್ಲ. ಕುಮಾರಸ್ವಾಮಿಯವರು ಈಗಲೇ ಹೆದರಿದ್ದಾರೆ ಎಂದು ಸ್ಪಷ್ಟವಾಗಿ ನುಡಿದರು. ಆದರೆ ಈ ಪ್ರಕರಣ ಸಂಬಂಧಪಟ್ಟಂತೆ ರಾಜ್ಯಪಾಲರು ತನಿಖೆಗೆ ಅನುಮತಿ ನೀಡಬಹುದು ಎಂಬ ಭಯ ಅವರನ್ನು ಕಾಡುತ್ತಿದೆ. ಅವರ ವಿರುದ್ಧ ಲೋಕಾಯುಕ್ತ ಎಸ್ ಐ ಟಿಯವರು ತನಿಖಾ ವರದಿ ನೀಡಿ ಪ್ರಾಸಿಕ್ಯೂಷನ್ ಗೆ ಅನುಮತಿ ಕೋರಿದ್ದಾಗ್ಯೂ, ರಾಜ್ಯಪಾಲರಿಂದ ಯಾವುದೇ ಕ್ರಮವಾಗದ ಕಾರಣ, ಎಸ್ ಐ ಟಿ ಮತ್ತೊಮ್ಮೆ ಅರ್ಜಿ ಸಲ್ಲಿಸಿದೆ ಎಂದರು.

ಕುಮಾರಸ್ವಾಮಿಯವರು ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿ ಯನ್ನು ಬಿಡುಗಡೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ವಿಚಾರದ ಬಗ್ಗೆ ತನಗೆ ಮಾಹಿತಿಯಿಲ್ಲವೆಂದು ತಿಳಿಸಿದ ಮುಖ್ಯಮಂತ್ರಿಗಳು, ಕುಮಾರಸ್ವಾಮಿ ಯವರದು ಎಂದಿಗೂ ಹಿಟ್ ಎಂಡ್ ರನ್ ಕೇಸ್ ಎಂದರು.

ಅಭಿವೃದ್ಧಿ ಕೆಲಸದಲ್ಲಿ ರಾಜಕೀಯವಿಲ್ಲ: ಕೊಪ್ಪಳ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸೇರಿದಂತೆ ಅಭಿವೃದ್ಧಿ ಕೆಲಸಗಳ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರಿಸುತ್ತಾ, ಸರ್ಕಾರ ಅಭಿವೃದ್ಧಿ ಕೆಲಸದಲ್ಲಿ ರಾಜಕೀಯ ಮಾಡದೇ, ಜಿಲ್ಲೆಯ ಜನರ ಹಾಗೂ ಇಲ್ಲಿನ ಅಭಿವೃದ್ಧಿ ಪರವಾಗಿಯೇ ನಮ್ಮ ನಿರ್ಣಯಗಳಿರುತ್ತವೆ. ಕೊಪ್ಪಳ ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿಯಿದ್ದು, ಇಲ್ಲಿನ ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಿದ್ದೇನೆ ಎಂದರು.

**ಬೆಂಬಲ ಬೆಲೆ ಕುರಿತಂತೆ ಕೇಂದ್ರಕ್ಕೆ ಪತ್ರ:** ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ಬಗ್ಗೆ ಮಾತನಾಡಿ, ಹೆಸರುಕಾಳು ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ ಎಂದರು.

ಮೈಕ್ರೋ ನ್ಯೂಸ್

## ವಿವಿಧ ಯೋಜನೆಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಡಿ ವಿವಿಧ ಯೋಜನೆಗಳಡಿ ಅರ್ಹ ಮಹಿಳಾ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಿರಬೇಕು, ಉದ್ಯೋಗಿನಿ ಯೋಜನೆಯ ಎಸ್.ಸಿ/ಟಿಎಸ್.ಪಿ ಬಳಕೆಯಾಗದ (ಅನ್‌ಸ್ಪೆಂಟ್) ಅನುದಾನದಡಿ ಸೌಲಭ್ಯ ಪಡೆಯಲು ಇಚ್ಛಿಸುವ ಫಲಾಪೇಕ್ಷಿಗಳು, ಅರ್ಜಿದಾರರು ಬಾಪೂಜಿ ಸೇವಾಕೇಂದ್ರ, ಗ್ರಾಮಒನ್ ಸೇವಾಕೇಂದ್ರ, ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ, ಸೇವಾಸಿಂಧೂ ಪೋರ್ಟಲ್ https://sevasindhu.karnataka.gov.in ನಲ್ಲಿ ಸಲ್ಲಿಸಬೇಕು.

## ಲಿಂಗಾಯತ ಸಮುದಾಯ ಅಭಿವೃದ್ಧಿ ನಿಗಮದ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವೀರಶೈವ–ಲಿಂಗಾಯತ ಜಾತಿ ಹಾಗೂ ಉಪಜಾತಿಗೆ ಸೇರಿದ ಸಮುದಾಯದ ಜನರ (ಪ್ರವರ್ಗ–111ಬಿ) ಅಭಿವೃದ್ಧಿಗಾಗಿ 2024–25ನೇ ಸಾಲಿನ ವಿವಿಧ ಯೋಜನೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಒಂದು ಬಾರಿ ನಿಗಮದ ಯಾವುದಾದರು ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲಿ ಅಂತಹವರು ಹಾಗೂ ಅವರ ಕುಟುಂಬ ದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಈ ಎಲ್ಲಾ ಯೋಜನೆಗಳಲ್ಲಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸುವ ಕರ್ನಾಟಕ ವೀರಶೈವ ಲಿಂಗಾಯತ ಸಮುದಾಯ ಅರ್ಜಿದಾರರು ಸೇವಾಸಿಂಧು ಪೋರ್ಟಲ್‌ನಲ್ಲಿ ಗ್ರಾಮಒನ್, ಬೆಂಗಳೂರು ಒನ್, ಕರ್ನಾಟಕ ಒನ್‌ಗಳ ಮೂಲಕ ಮತ್ತು ಸ್ವಾತಂತ್ರ ಅಮೃತ ಮುನ್ನಡೆ ಯೋಜನೆಗೆ ಕೌಶಲ್ಯ ಕರ್ನಾಟಕ ತಂತ್ರಾಶ https://www.kaushalkar.com ನಲ್ಲಿ ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಸಮುದಾಯ ಅಭಿವೃದ್ಧಿ ನಿಗಮದ ಜಾಲತಾಣ https://kvldcl.karnataka.gov.in ಅಥವಾ ನಿಗಮದ ದೂರವಾಣಿ ಸಂಖ್ಯೆ 080–22865522, ಮೊಬೈಲ್ ಸಂಖ್ಯೆ 9900012351ಗೆ ಸಂಪರ್ಕಿ

# ಆ.24 ಅಭಯ ಆಂಜನೇಯಸ್ವಾಮಿ ಪ್ರಾಣ ಪ್ರತಿಷ್ಠಾಪನೆ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಕೆ.ಅಯ್ಯನಹಳ್ಳಿ ಗ್ರಾಮದ ಅಭಯ ಆಂಜನೇಯಸ್ವಾಮಿಯ ಪುನರ್ ಪ್ರಾಣ ಪ್ರತಿಷ್ಠಾಪನೆಯು ಆ–24 ಶನಿವಾರ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಸಿದ್ಧಲಿಂಗರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಶಾಸ್ತ್ರೋಕ್ತವಾಗಿ ನೆರವೇರಲಿದೆ.

ಆ.23 ಶುಕ್ರವಾರ ಸಂಜೆ 108 ಕುಂಭ ಕಳಸದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ನಡೆಯಲಿದ್ದು.ಗಂಗಾಪೂಜೆ, ಗೋಸಮೇತ ದೇವಾಲಯ ಪ್ರವೇಶ ಹಾಗೂ ಗಣಪತಿ ಪೂಜೆ ಲಕ್ಷ್ಮೀ ನಾರಾಯಣ, ಉಮಾಮಹೇಶ್ವರಿ ದೇವರ ಪೂಜೆ ಹಾಗೂ ಗಣಪತಿ ,ನವಗ್ರಹ



ಹೋಮ ಸೇರಿದಂತೆ ವಿವಿಧ ಹೋಮ ಮತ್ತು ಪೂಜಾ ಕೈಂಕಾರ್ಯಗಳು ನೆರವೇರುವವು.

ಅಭಯ ಆಂಜನೇಯ ಸ್ವಾಮಿಯ ಪುನರ್ ಪ್ರಾಣ ಪ್ರತಿಷ್ಠಾಪನೆ ನೆರವೇರಿದ ನಂತರ ಧಾರ್ಮಿಕ ಸಮಾರಂಭ ನಡೆಯ ಲಿದ್ದು ಉಜ್ಜಯಿನಿ ಜಗದ್ಗುರುಗಳು ಸಿದ್ಧಲಿಂಗರಾಜದೇಶಿ ಕೇಂದ್ರ ಮಹಾಸ್ವಾಮಿಗಳು ಸಮಾರಂಭ ಸಾನಿಧ್ಯ ವಹಿಸಿ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಲಿದ್ದಾರೆ.

ಶ್ರೀ ಸ್ವಾಮಿಯ ಕಾರ್ಯಕ್ರಮಕ್ಕೆ ಜನ ಪ್ರತಿನಿಧಿಗಳಾದ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು ಜಮೀರ್ ಖಾನ್, ಸಂಸದ ಈ.ತುಕಾರಾಂ, ಶಾಸಕರಾದ ನೇಮಿರಾಜ್ ನಾಯ್ಕ್, ಎಂ.ಪಿ ಲತಾಮಲ್ಲಿಕಾರ್ಜುನ ಅನೇಕ ಗಣ್ಯರು ಹಾಗೂ ಶ್ರೀ ಸ್ವಾಮಿಯ ಭಕ್ತರು ಆಗಮಿಸಲಿದ್ದಾರೆ. ತಾಲೂಕಿನ ಎಲ್ಲಾ ಸದ್ಭಕ್ತರು, ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು, ದೇವಸ್ಥಾನದ ಸಮಸ್ತ ದೈವಸ್ಥರು ಪ್ರಕಟಣೆಯಲ್ಲಿ ತಿಳಿಸಿದೆ.

# ತಿಪ್ಪೆ ಅಣಬೆ ತಿಂದು 9ಜನ ಅಸ್ವಸ್ಥ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ರಾಯರಾಳು ತಾಂಡದ ಹೊರ ವಲಯದ ತಿಪ್ಪೆಯ ಮೇಲೆ ಬೆಳೆದಂತ ಅಣಬೆ(ನಾಯಿಕೊಡೆ)ಯನ್ನು ಪ್ರೈಮಾಡಿ ಸೇವಿಸಿದ್ದ 9 ಜನರು ವಾಂತಿಮಾಡಿಕೊಂಡು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ ಘಟನೆ ಮಂಗಳವಾರ ಸಂಜೆ ಜರುಗಿದೆ. ಆಹಾರದ ಜೊತೆ ಅಣಬೆಯನ್ನು ಪ್ರೈಮಾಡಿ ಸೇವಿಸಿದ್ದ 7 ಜನ ವಯಸ್ಕರು ಹಾಗೂ ಇಬ್ಬರು ಮಕ್ಕಳು ವಾಂತಿಯಾದ ಹಿನ್ನೆಲೆಯಲ್ಲಿ ಅಸ್ವಸ್ಥರಾಗಿ, ಇಲ್ಲಿಯ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರು ಎಚ್.ರಾಜುನಾಯ್ಕ್ ಹಾಗೂ ಇತರರು ಸೇರಿ ಒಂದೇ ಕುಟುಂಬದವರಾಗಿದ್ದು, ರಾತ್ರಿ ಊಟದ ಸಮಯದಲ್ಲಿ ಈ ರೀತಿ ಘಟನೆಯಾಗಿದೆ ಎಂದು ತಿಳಿಸಿದ್ದಾರೆ.



ಅಸ್ವಸ್ಥರಾಗಿದ್ದವರಿಗೆ ಈಗಾಗಲೇ ಸೂಕ್ತ ಚಿಕಿತ್ಸೆ ನೀಡಿದ್ದು, ಗುಣಮುಖರಾಗಿದ್ದಾರೆ ಎಂದು ತಾಲೂಕು ವೈದ್ಯಾಧಿಕಾರಿ ಡಾ.ಶಿವರಾಜ್ ತಿಳಿಸಿದರು.

# ಉಚಿತ ಜೈಪುರ ಕೃತಕ ಕಾಲು ಜೋಡಣೆ ಶಿಬಿರ

## ಎಂಎಸ್‌ಪಿಎಲ್ ಸಿಎಸ್ಸಾರ್ ಉಪಾಧ್ಯಕ್ಷ ಎಚ್.ಕೆ.ರಮೇಶ್ ಹೇಳಿಕೆ | ಆ.24 ರಿಂದ 26ವರೆಗೆ | ಡಿಸಿ ದಿವಾಕರ ಉದ್ಘಾಟಿಸಲಿದ್ದಾರೆ

**ಹಂಪಿ ಟೈಮ್ಸ್ ಹೊಸಪೇಟೆ**

ಎಂ.ಎಸ್.ಪಿ.ಎಲ್. ಲಿಮಿಟೆಡ್ ಹಾಗೂ ಭಗವಾನ್ ಮಹಾವೀರ್ ಅಂಗವಿಕಲರ ಸಹಕಾರ ಸಮಿತಿ ಜೈಪುರ ಸಹಯೋಗದಲ್ಲಿ ಆ.24, 25 ಮತ್ತು 26 ರಂದು ಹೊಸಪೇಟೆ ನೆಹರೂ ಕಾಲೊನಿಯಲ್ಲಿರುವ ಸಹಕಾರಿ ಕಲ್ಯಾಣ ಮಂಟಪದಲ್ಲಿ ಉಚಿತ ಜೈಪುರ ಕೃತಕ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಯಾವುದೇ ರೀತಿಯ ಕಾಲಿನ ಅಂಗವಿಕಲತೆ ಹೊಂದಿರುವವರು ಶಿಬಿರದ ಪ್ರಯೋಜನ ಪಡೆಯಬಹುದು ಎಂದು ಎಂ.ಎಸ್.ಪಿ.ಎಲ್. ಸಮಾಜ ಸೇವಾ ವಿಭಾಗದ ಉಪಾಧ್ಯಕ್ಷ ಎಚ್ ಕೆ ರಮೇಶ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಾನಾ ಕಾರಣಗಳಿಂದ ಕಾಲಿನ ಅಂಗವೈಕಲ್ಯಕ್ಕೀಡಾದವರು ಸಂಸ್ಥೆಯಿಂದ 10 ವರ್ಷಗಳಿಂದ ಆಯೋಜಿಸುತ್ತಿರುವ ಉಚಿತ ಜೈಪುರ ಕೃತಕ ಕಾಲು ಜೋಡಣೆ ಶಿಬಿರದಲ್ಲಿ ನಾನಾ ಭಾಗಗಳಿಂದ ಆಗಮಿಸಿ ಪ್ರಯೋಜನ ಪಡೆದಿದ್ದಾರೆ. ಅನೇಕರು ಮತ್ತೊಬ್ಬರ ಮೇಲೆ ಅವಲಂಬನೆಯಾಗದೇ ಸ್ವಾವಲಂಬಿ ಜೀವನ ನಡೆಸಲೆಂದು ಎಂಎಸ್‌ಪಿಎಲ್ ಸಂಸ್ಥೆ ಕಳೆದ 10 ವರ್ಷಗಳಿಂದ ಈ ಶಿಬಿರವನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದೆ. ಉತ್ತರ



ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮತ್ತು ಆಂಧ್ರದ ಅನಂತಪುರ, ಕರ್ನೂಲ್, ಕಡಪ ಜಿಲ್ಲೆಗಳಿಂದ ಕಾಲು ಜೋಡಣೆಗೆ ಆಗಮಿಸುತ್ತಾರೆ.

ಹುಟ್ಟಿನಿಂದ ಕಾಲಿನ ಅಂಗವಿಕಲತೆ, ಪೋಲಿಯೋ ಪೀಡಿತರು, ಆಕಸ್ಮಿಕ ಅಪಘಾತದಿಂದ ಕಾಲು ಕಳೆದು ಕೊಂಡವರು ಸೇರಿದಂತೆ ಯಾವುದೇ ರೀತಿಯ ಕಾಲಿನ ಅಂಗವೈಕಲ್ಯತೆ ಹೊಂದಿದವರು ಶಿಬಿರದಲ್ಲಿ ಭಾಗವಹಿಸಿ ಉಚಿತವಾಗಿ ಪ್ರಯೋಜನ ಪಡೆಯಬಹುದಾಗಿದೆ. ಈಗಾಗಲೇ ಸಂಸ್ಥೆವತಿಯಿಂದ 2357ಕ್ಕೂ ಹೆಚ್ಚು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. 1155 ಜನರಿಗೆ ಕೃತಕ ಕಾಲು ಜೋಡಣೆ, 709 ಕ್ಯಾಲಿಪರ್ಸ್, 44 ವಾಕರ್, 72 ಕೈಗೋಲು, 253 ಜನರಿಗೆ ಊರುಗೋಲು, 38 ಜನರಿಗೆ ಗಾಲಿ ಕುರ್ಚಿ, 38 ಜನರಿಗೆ ಕೈಚಾಲಿತ ಸೈಕಲ್ ಹಾಗೂ 48 ಜನರಿಗೆ ಲಘು ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗಿದೆ. ಶಿಬಿರದ ಪ್ರಯೋಜನ ಪಡೆದವರು ಸ್ವಾವಲಂಬಿ ಬದುಕು ಕಟ್ಟಿಕೊಂಡು ಮಾದರಿಯಾಗಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿ.ಎಂ.ನಾಗರಾಜ ಇದ್ದರು.

**ಆ.24 ರಂದು ಬೆಳಿಗ್ಗೆ 11 ಕ್ಕೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಉದ್ಘಾಟಿಸಲಿದ್ದಾರೆ. 16 ಜನ ತಂತ್ರಜ್ಞರು, 10ಕ್ಕೂ ಅಧಿಕ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಸ್ಥಳದಲ್ಲೆ ಕಾಲಿನ ಅಳತೆ ಪಡೆದು, ಸಿದ್ಧಪಡಿಸಲಾಗುತ್ತದೆ. ಬೆಳಿಗ್ಗೆ ಬಂದವರಿಗೆ ಸಂಜೆಯೊಳಗೆ ಮತ್ತು ಮಧ್ಯಾಹ್ನ ನಂತರ ಬಂದವರಿಗೆ ಮರುದಿನ ಬೆಳಿಗ್ಗೆ ಕೃತಕ ಕಾಲು ಜೋಡಣೆ ಮಾಡಲಾಗುತ್ತದೆ. ಕಾಲು ಜೋಡಣೆಗೆ ಬಂದವರಿಗೆ ಉಚಿತ ವಸತಿ, ಊಟ ಸೌಲಭ್ಯ ಕಲ್ಪಿಸಲಾಗುತ್ತದೆ. ಶಿಬಿರದಲ್ಲಿ ಈಗಾಗಲೇ 150 ಜನರು ಹೆಸರು ನೋಂದಾಯಿಸಿದ್ದಾರೆ. 200ಕ್ಕೂ ಅಧಿಕ ಜನರು ಭಾಗವಹಿಸುವ ನಿರೀಕ್ಷೆ ಇದೆ.**

**– ಎಚ್.ಕೆ.ರಮೇಶ,** ಉಪಾಧ್ಯಕ್ಷರು, ಸಮಾಜ ಸೇವಾ ವಿಭಾಗ, ಎಂ.ಎಸ್.ಪಿ.ಎಲ್.


Print & Digital Ads
Book @ Economical rates
Hosapete-Vijayanagara Dist.

HAMPI TIMES VIJAYANAGARA

ನಂ.1 ಓದುಗರ ಮೆಚ್ಚಿನ ದಿನಪತ್ರಿಕೆ
ಹಂಪಿ ಟೈಮ್ಸ್
ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ
ಅತ್ಯಧಿಕ ಓದುಗರನ್ನು ತಲುಪಿ

- Recruitment job
- Tender/Notice
- Change of name
- Matrimonial
- obituary (Death announcement)
- Businesses
- Education
- Property Real Estate
- Lost and found
- Marriage Bureau
- Remembrance
- Service
- Retail/shopping
- Personnel Announcement
- Computers and Hardware
- Astrology
- Loan /Finance
- Vehicle Automobiles
- Tours and Travels

Education is the most powerful weapon which you can use to change the world
- Nelson Mandela

M:94486 33038
Visit Us
www.hampitimes.com/epaper.hampitimes.com

ನಮ್ಮ ಶಾಲೆ ನಮ್ಮ ದೇಗುಲ: ಸರ್ಕಾರಿ ಶಾಲೆಗಳು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಪವಿತ್ರ ಸ್ಥಳ, ಶಾಲೆಗಳ ಸ್ವಚ್ಛತೆ, ಸಂರಕ್ಷಣೆ ನಮ್ಮೆಲ್ಲರ ಹೊಣೆ. ಬನ್ನಿ ಕೈಜೋಡಿಸಿ...

# ವಿಜ್ಞಾನ

## ಬೇಸಿಗೆಯಲ್ಲಿ ನಾವು ಏಕೆ ಹೆಚ್ಚು ಬೆವರುತ್ತೇವೆ?

■ ಆರ್.ಬಿ.ಗುರುಬಸವರಾಜ

ಶನಿವಾರದ ಶಾಲೆ ಮುಗಿಸಿಕೊಂಡ ಮನೆಗೆ ಬಂದ ನಾಗವೇಣಿ 'ಹುಶ್ಶಪ್ಪಾ,,,,' ಎನ್ನುತ್ತಾ ಬ್ಯಾಗ್ ಬಿಸಾಡಿ ಫ್ಯಾನ್ ಹಾಕಿಕೊಂಡು ಕುಳಿತಳು. ಇವಳ ಉದ್ಗಾರ ಕೇಳಿದ ತಾಯಿ 'ಯಾಕೆ! ಏನಾಯ್ತು?' ಎಂದಳು. "ಏನಿಲ್ಲ ಬಿಡಮ್ಮ, ಬಿಸಿಲಿನಲ್ಲಿ ನಡೆದು ಬಂದಿದ್ದಕ್ಕೆ ಮೈಯೆಲ್ಲಾ ಬೆವೆತು ಹೋಯ್ತು" ಎಂದಳು. 'ಹೂ, ಬಿಸಿಲು ತುಂಬಾ ಇದೆ. ಸೆಕೆ ಹೆಚ್ಚು ಇರೋದ್ರಿಂದ ಹೆಚ್ಚು ಬೆವರು ಬಂದಿದೆ. ಒಂದಿಷ್ಟು ತಣ್ಣೀರಲ್ಲಿ ಮುಖ ತೊಳೆದುಕೊ. ಬೇಗನೆ ಸಮಾದಾನ ಆಗುತ್ತೆ' ಎಂದಳು ತಾಯಿ. "ಅಮ್ಮಾ ಬೇಸಿಗೆಯಲ್ಲಿ ನಾವು ಏಕೆ ಹೆಚ್ಚು ಬೆವರುತ್ತೇವೆ?" ಎಂದಳು ನಾಗವೇಣಿ. ಅದಕ್ಕೆ ತಾಯಿಯ ಉತ್ತರ ಹೀಗಿದೆ.



ಬೇಸಿಗೆಯಲ್ಲಿ ನಾವು ಹೆಚ್ಚು ಬೆವರುತ್ತೇವೆ. ಏಕೆಂದರೆ ಬಾಹ್ಯ ತಾಪಮಾನವು ಇತರ ಋತುಗಳಿಗಿಂತ ಹೆಚ್ಚಾಗಿರುತ್ತದೆ. ಬೆವರುವುದು ನೈಸರ್ಗಿಕ ಪ್ರಕ್ರಿಯೆಯಾಗಿದ್ದು ಅದು ದೇಹದ ಉಷ್ಣತೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಬೆವರುವಿಕೆ ಬಿಸಿ ವಾತಾವರಣದಲ್ಲಿ ಹೆಚ್ಚು ಸಕ್ರಿಯವಾಗಿರುತ್ತದೆ. ನಮ್ಮ ದೇಹದ ಉಷ್ಣತೆಯು ಹೆಚ್ಚಾದಾಗ ನಮ್ಮ ಚರ್ಮದ ಮೇಲ್ಮೈಗೆ ಬೆವರು ಬಿಡುಗಡೆ ಮಾಡುವಂತೆ ಮೆದುಳು ಬೆವರಿನ ಗ್ರಂಥಿಗಳಿಗೆ ಸಂಕೇತವನ್ನು ಕಳಿಸುತ್ತದೆ.

ಬೇಸಿಗೆಯಲ್ಲಿ ಗಾಳಿಯ ಉಷ್ಣತೆಯು ಹೆಚ್ಚಾಗಿರುತ್ತದೆ. ಇದರಿಂದ ನಮ್ಮ ದೇಹದ ಉಷ್ಣತೆಯೂ ಹೆಚ್ಚಾಗಿರುತ್ತದೆ. ಸ್ಥಿರವಾದ ಆಂತರಿಕ ತಾಪಮಾನ ಕಾಪಾಡಿಕೊಳ್ಳಲು ದೇಹವು ಹೆಚ್ಚು ಶ್ರಮಿಸುತ್ತಿರುತ್ತದೆ. ಬೆವರುವ ಮೂಲಕ ದೇಹವು ಉಷ್ಣತೆಯನ್ನು ಹೊರಹಾಕುತ್ತದೆ. ಬೆವರುವುದು ದೇಹವನ್ನು ತಣ್ಣಗಾಗಿಸುವ ಒಂದು ನೈಸರ್ಗಿಕ ವಿಧಾನವಾಗಿದೆ.

ದೇಹದ ಉಷ್ಣತೆಯನ್ನು ನಿಯಂತ್ರಿಸುವ ಮೆದುಳಿನ ಭಾಗವಾಗಿರುವ ಹೈಪೋಥಾಲಮಸ್‌ನಿಂದ ಬೆವರು ಗ್ರಂಥಿಗಳು ಪ್ರಚೋದಿಸಲ್ಪಡುತ್ತವೆ. ದೇಹದ ಉಷ್ಣತೆಯು ಹೆಚ್ಚಾದಾಗ ಹೈಪೋಥಾಲಮಸ್ ಬೆವರು ಗ್ರಂಥಿಗಳು ಬೆವರು ಉತ್ಪಾದಿಸುವಂತೆ ಸಂಕೇತಿಸುತ್ತದೆ. ಬೆವರು ನೀರು, ಉಪ್ಪು ಮತ್ತು ಇತರ ಖನಿಜಗಳಿಂದ ಕೂಡಿದೆ. ಬೆವರು ನಮ್ಮ ಚರ್ಮದಿಂದ ಆವಿಯಾಗುವ ಮೂಲಕ ದೇಹದ ಶಾಖವನ್ನು ಹೊರಹಾಕಿ ದೇಹವನ್ನು ತಂಪಾಗಿಸುತ್ತದೆ. ಬೇಸಿಗೆಯಲ್ಲಿ ಬೆವರುವಿಕೆಯಿಂದ ಕಳೆದುಹೋದ ನೀರಿನ ಅಂಶವನ್ನು ಮರುಪೂರಣ ಮಾಡಲು ಹೆಚ್ಚು ನೀರು ಕುಡಿಯುವುದು ಅತ್ಯಗತ್ಯ. ಶಾಖದ ಬಳಲಿಕೆಯನ್ನು ತಡೆಗಟ್ಟಲು ಸಡಿಲವಾದ ಮತ್ತು ಹಗುರವಾದ ಬಟ್ಟೆಗಳನ್ನು ಧರಿಸುವುದು ಮತ್ತು ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸುವುದು ಒಳ್ಳೆಯದು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪ್ರತಿಮೆಗಳ ಪತನ

ತ್ರಿಪುರದಲ್ಲಿ ಕಮ್ಯುನಿಸ್ಟ್ ಪಕ್ಷ ಸೋತು, ಬಿಜೆಪಿ ಅಧಿಕಾರಕ್ಕೆ ಬಂದ ಬೆನ್ನಿಗೇ, ಅಲ್ಲಿದ್ದ ಲೆನಿನ್ ಪ್ರತಿಮೆ ಕೆಡವಿದ ಘಟನೆ ನಡೆಯಿತು. ಇದು ಭಾರತದಲ್ಲಿ ಬೇರೆಬೇರೆ ಕಡೆ ವಿಗ್ರಹಭಂಜಕ ಕೃತ್ಯಗಳಿಗೆ ಪ್ರಚೋದನೆ ಕೊಟ್ಟಿತು. ಈ ಪ್ರಕ್ರಿಯೆಯಲ್ಲಿ ಭಗ್ನಕ್ಕೊಳಗಾದ ಮೂರ್ತಿಗಳಲ್ಲಿ ಅಂಬೇಡ್ಕರ್, ಪೆರಿಯಾರ್, ಗಾಂಧಿ, ಶ್ಯಾಮಾಪ್ರಸಾದ್ ಮುಖರ್ಜಿ ಅವರವು ಸೇರಿದ್ದವು. ಹೆಚ್ಚಿನ ಪ್ರತಿಮೆಗಳು ಬೇರೆಬೇರೆ ಸೈದ್ಧಾಂತಿಕ ಹಿನ್ನೆಲೆಯ ರಾಜಕೀಯ ಪಕ್ಷಗಳಿಗೆ ಸೇರಿದವು. ಸಿದ್ಧಾಂತಬದ್ಧ ಪಕ್ಷಗಳಲ್ಲಿ ಅಮೂರ್ತ ಸಿದ್ಧಾಂತದ ಮೂರ್ತ ಪ್ರತೀಕಗಳಾಗಿರುವ ಪ್ರತಿಮೆ, ಚಿತ್ರಪಟ, ಧ್ವಜಗಳಿಗೆ ಮಹತ್ವವಿದೆ. ಇವುಗಳಲ್ಲಿ ಸ್ವಸಿದ್ಧಾಂತದ ಪ್ರಸಾರ ಮಾತ್ರವಲ್ಲ, ಎದುರಾಳಿ ಸಿದ್ಧಾಂತದ ವಿರೋಧದ ಅಂಶವೂ ಅಡಗಿರುತ್ತದೆ. ಈ ವಿರೋಧವು ದ್ವೇಷವಾದಾಗ ತರ್ಕವು ಮೂರ್ತಿಭಂಜನೆಗೂ ಕಾರ್ಯಕರ್ತರ ಕೊಲೆಗೂ ಮುಟ್ಟುತ್ತದೆ. ಸಿದ್ಧಾಂತ, ಅಧಿಕಾರ, ಯುದ್ಧ, ಆರ್ಥಿಕತೆ ಹಾಗೂ ಸಾಂಸ್ಕೃತಿಕ ಯಜಮಾನಿಕೆಗಳ ಪ್ರತಿಮೆ-ಸಂಕೇತಗಳಿಗೆ ಧಾರ್ಮಿಕ ಆಯಾಮ ಸೇರಿಕೊಂಡಲ್ಲಿ ಮತ್ತಷ್ಟು ಭಾವೋನ್ಮಾದ ಏರ್ಪಡುತ್ತದೆ. ದೇಶ ವಿಭಜನೆಯ ಹೊತ್ತಲ್ಲಿ ಪ್ರತಿಮಾ ದ್ವೇಷವು ಧಾರ್ಮಿಕ ದ್ವೇಷವಾಗಿ ಪ್ರಕಟವಾಯಿತು. ಇದನ್ನು ನಾಟಕೀಯ ವ್ಯಂಗ್ಯದಲ್ಲೂ ಗಾಢ ವಿಷಾದದಲ್ಲೂ ಉರ್ದು ಲೇಖಕ ಸಾದತ್ ಹಸನ್ ಮಂಟೊ, ತಮ್ಮ ಕಿರುಗತೆ 'ಗಾರ್ಲೆಂಡ್'ನಲ್ಲಿ ಚಿತ್ರಿಸುವರು.

ತ್ರಿಪುರ ಪ್ರವಾಸದಲ್ಲಿ ನಾನು ಕಂಡಂತೆ, ಕಮ್ಯುನಿಸ್ಟ್ ಆಳಿಕೆಗಳಲ್ಲಿ ಸಾಮಾನ್ಯ ಆಗಿರುವಂತೆ ಪ್ರತಿಮಾ/ಚಿತ್ರಪಟ ಸಂಸ್ಕೃತಿ ಮೂರು ಆಯಾಮಗಳಲ್ಲಿತ್ತು. ಪಕ್ಷದ ಕಛೇರಿಗಳಲ್ಲಿ ಮಾರ್ಕ್ಸ್ ಲೆನಿನ್ ಏಂಗೆಲ್ಸ್ ಚೆಗೆವಾರ ಇತ್ಯಾದಿ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗೆ ಸೇರಿದವರ ಚಿತ್ರಗಳಿದ್ದವು. ಭಾರತದ ಮಾವೋವಾದಿಗಳ ಜತೆ ಸಿಪಿಎಂನ ಸೈದ್ಧಾಂತಿಕ ವಿರೋಧವಿರುವ ಕಾರಣವಿರಬೇಕು, ತ್ರಿಪುರ ಚೀನಾ ಗಡಿಗೆ ಸಮೀಪವಿದ್ದರೂ ಮಾವೊ ಪಟಗಳು ಕಾಣಲಿಲ್ಲ. ಆದರೆ ಪ್ರಭುತ್ವದ ಹಿಂಸೆಯ ಕಾರಣಕ್ಕಾಗಿ ವಿವಾದಕ್ಕೆ ಒಳಗಾಗಿರುವ ಸ್ಟಾಲಿನ್ ಪಟವಿತ್ತು. ಕಮ್ಯುನಿಸ್ಟ್ ಚಳುವಳಿಯಲ್ಲಿ ಜನಸಾಮಾನ್ಯರು ಹುತಾತ್ಮರಾಗಿರುವ ಕಡೆಯೂ ಸ್ಮಾರಕಗಳಿವೆ. ಪಾರ್ಟಿ ಆಫೀಸಿನಲ್ಲಿರುವ ಪಟಗಳಿಗಿಂತ ಬಯಲಲ್ಲಿರುವ ಇವು ಹೋರಾಟದ ಇತಿಹಾಸವನ್ನು ದಾಟಿಸಲು ಹೆಚ್ಚು ಶಕ್ತವಾಗಿದ್ದವು.

ತ್ರಿಪುರದಲ್ಲಿ ಗಾಂಧಿ, ವಿವೇಕಾನಂದ, ಸುಭಾಷ್‌ಚಂದ್ರ, ಟಾಗೂರರ ಪ್ರತಿಮೆಗಳು ಸಾಮಾನ್ಯವಾಗಿದ್ದವು.ಮಹಾರಾಷ್ಟ್ರ ಕರ್ನಾಟಕಗಳಿಗೆ ಹೋಲಿಸಿದರೆ ಅಂಬೇಡ್ಕರ್ ಪ್ರತಿಮೆ ಕಡಿಮೆ ಕಂಡವು. ಬುಡಕಟ್ಟು ಸಮಾಜಗಳಲ್ಲಿ ಸಾಂಪ್ರದಾಯಿಕ ಜಾತಿವ್ಯವಸ್ಥೆಯ ಊರಲ್ಲಿರುವಂತೆ ದಲಿತರು ಇರುವುದಿಲ್ಲ. ಕಮ್ಯುನಿಸ್ಟರಿಗೆ ಜಾತಿಅಸ್ಮಿತೆ ನೆಲೆಯ ಹೋರಾಟಗಳಲ್ಲಿ ಅಷ್ಟು ಆಸ್ಥೆಯಿರುವುದಿಲ್ಲ. ವರ್ಗಚಳುವಳಿ ಬಲವಾಗಿರುವ ಕಡೆ ದಲಿತ ಚಳುವಳಿಯೂ ಕ್ಷೀಣವಾಗಿರುತ್ತದೆ. ನಾವು ಭೇಟಿಗೈದ ದಲಿತ ಹಿನ್ನೆಲೆಯ- -ಕಮ್ಯುನಿಸ್ಟ್ ಆಡಳಿತದ ಕಡುವಿರೋಧಿಯಾಗಿದ್ದ- ಒಬ್ಬ ಯುವವಿಜ್ಞಾನಿ, ತ್ರಿಪುರದಲ್ಲಿ ಅಸ್ಪೃಶ್ಯತೆ ಸಮಸ್ಯೆ ಅಷ್ಟಾಗಿಲ್ಲವೆಂದರು. ವಿವೇಕಾನಂದ, ಬೋಸ್, ಟಾಗೂರರ ಪ್ರತಿಮೆಗಳು ಮೂಲತಃ ಬಂಗಾಳಿ ಸಂಸ್ಕೃತಿಯವು. ಇವುಗಳ ಇರುವಿಕೆ ಕೆಲವು ಚಾರಿತ್ರಿಕ ಕಾರಣಗಳಿವೆ. ಬಂಗಾಳ ವಿಭಜನೆಯಿಂದ ಸೃಷ್ಟಿಯಾದ ಬಾಂಗ್ಲಾ ದೇಶದಿಂದ, ತ್ರಿಪುರಕ್ಕೆ ಪಶ್ಚಿಮ ಬಂಗಾಳದ ಜತೆ ಮೊದಲಿಂದಿದ್ದ ಪಾರಂಪರಿಕ ನಂಟು ಕಡಿದುಹೋಯಿತು. ಅಲ್ಲಿದ್ದ ಬಂಗಾಳಿ ಸಂಸ್ಕೃತಿ ನಡುಗಡ್ಡೆಯಾಯಿತು. ಇದು ಬಂಗಾಳಿ ಭಾಷೆ ಮತ್ತು ಪ್ರತಿಮೆಗಳ ಅಸ್ಮಿತೆ ರಕ್ಷಿಸಿಕೊಳ್ಳುವ ಒತ್ತಾಸೆಯನ್ನು ಸೃಷ್ಟಿಸಿತು. ಟಾಗೂರರ ಹೆಸರಲ್ಲಿ ಹಲವಾರು ಪ್ರತಿಮೆ, ಉದ್ಯಾನ, ಭವನ, ಸ್ಮಾರಕಗಳು ಇರುವುದಕ್ಕೆ ಇದೂ ಒಂದು ಕಾರಣವಿರಬೇಕು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಆದರೆ ಭೌಗೋಳಿಕ ಕಾರಣದಿಂದಲೂ ವರ್ಗದ ಹಿನ್ನೆಲೆಯಿಂದಲೂ, ಸೊಂಟದ ಮೇಲೆ ನಗ್ನಾವಸ್ಥೆಯಲ್ಲಿ ಹೆಚ್ಚುಕಾಣುವ ತ್ರಿಪುರಿಗಳ ನಡುವೆ, ಜಮೀನ್ದಾರ ಮನೆತನದಿಂದ ಬಂದ ಮೈಮುಚ್ಚುವ ನೀಳಗೌನು ತೊಟ್ಟ ಟಾಗೂರರ ಪ್ರತಿಮೆಗಳು ವೈರುಧ್ಯದಂತೆ ಕಾಣುತ್ತವೆ. ತ್ರಿಪುರಕ್ಕೂ ಟಾಗೂರರಿಗೂ ಇನ್ನೊಂದು ಕಾರಣಕ್ಕೆ ನಂಟು ಏರ್ಪಟ್ಟಿದೆ. ತ್ರಿಪುರ ರಾಜ್ಯದ ರಾಣಿಯ ಸಾವನ್ನು ವಸ್ತುವಾಗಿಸಿಕೊಂಡು ಅವರು ಬರೆದ ಕಾದಂಬರಿ 'ಭಗ್ನಹೃದಯ'. ಪತ್ನಿವಿಹೀನ ರಾಜನು ಕಾದಂಬರಿಯನ್ನೋದಿ ಟಾಗೂರರನ್ನು ಆಹ್ವಾನಿಸಿ ಗೌರವಿಸಿದ್ದನು. ತ್ರಿಪುರದ ಬಂಗಾಳಿಗಳಿಗೆ ವಿವೇಕಾನಂದ-ಸುಭಾಷರಿಗಿಂತ ಟಾಗೂರರು ಹೆಚ್ಚು ಆಪ್ತವಾಗಲು, ಅವರ ಜಾತ್ಯತೀತ ಚಿಂತನೆ ಹಾಗೂ ಆಧುನಿಕ ಪ್ರಜ್ಞೆಗಳೂ ಕಾರಣವಿರಬೇಕು.

ತ್ರಿಪುರದಲ್ಲಿ ಸ್ಥಳೀಯ ರಾಜರ ಪ್ರತಿಮೆಗಳೂ ಇದ್ದು, ಅವು ಅವರು ಕಟ್ಟಿದ ಕಾಲೇಜು-ಅರಮನೆಗಳಿಗೆ ಸೀಮಿತವಾಗಿದ್ದವು. ಮೈಸೂರು ಕೊಲ್ಹಾಪುರಗಳಲ್ಲಿ ಇರುವಂತೆ ಸಾರ್ವಜನಿಕ ಬದುಕಿನ ಭಾಗವಾಗಿರಲಿಲ್ಲ. ಇವಕ್ಕೆ ಹೋಲಿಸಿದರೆ, ರಾಜರ ಜನವಿರೋಧಿ ನೀತಿಗಳನ್ನು ವಿರೋಧಿಸಿದ ದಶರಥ್ ದೇಬರ್ಮರಂತಹ ಬಂಡುಕೋರ ನಾಯಕರ ಪ್ರತಿಮೆಗಳು ನಿಜವಾಗಿ ಸಾರ್ವಜನಿಕ ಬದುಕಿನಲ್ಲಿ ಹಾಸುಹೊಕ್ಕಾಗಿದ್ದವು. ಸ್ಥಳೀಯ ತಿಪ್ಪೆರಿ ಬುಡಕಟ್ಟಿನಿಂದ ಬಂದ ದೇಬರ್ಮ, ಸಂಸದ-ಮುಖ್ಯಮಂತ್ರಿ ಆಗಿದ್ದವರು. ಮಧ್ಯಭಾರತದಲ್ಲಿ ಬಿರ್ಸಾಮುಂಡಾ ಬಗ್ಗೆ ಇರುವಂತೆ, ದೇಬರ್ಮ ಬಗ್ಗೆ ತ್ರಿಪುರಿಗಳಲ್ಲಿ ಬಹಳ ಆದರವಿದೆ. ಆದರೆ ಇಂತಹ ಮಹಾ ನಾಯಕನ ಹೆಸರು ಆಧುನಿಕ ಭಾರತದ ಪ್ರಧಾನ ಧಾರೆಯ ಇತಿಹಾಸದಲ್ಲಿ ಕಾಣುವುದಿಲ್ಲ. ಕೆಲವರನ್ನು ಕೇಂದ್ರಕ್ಕೆ ತಂದು, ಮತ್ತೆ ಕೆಲವರನ್ನು ಅಂಚಿಗೆ ಸರಿಸುವ ಇತಿಹಾಸವೂ ತನ್ನದೇ ಬಗೆಯಲ್ಲಿ ಪ್ರತಿಮಾ ಸ್ಥಾಪನೆ ಮತ್ತು ನಾಶದ ಕೆಲಸ ಮಾಡುತ್ತದೆ. ಭಾರತದ ಚೌಕ-ಉದ್ಯಾನಗಳಲ್ಲಿರುವ ಪ್ರತಿಮೆಗಳನ್ನು ಈ ದೃಷ್ಟಿಯಿಂದ ಗಮನಿಸಬೇಕು. ಇವು ಸಾರ್ವಜನಿಕ ಬದುಕಿನಲ್ಲಿ ಸ್ತ್ರೀ ಭಾಗವಹಿಸುವಿಕೆಯ ಕ್ಷೀಣ ಸ್ವರೂಪವನ್ನೂ, ಸ್ತ್ರೀಸಾಧನೆಯನ್ನು ಗುರುತಿಸಲಾರದ ಗಂಡುವಾದಿ ಚರಿತ್ರೆಯ ಗುಣವನ್ನೂ ಒಟ್ಟಿಗೆ ಹೇಳುತ್ತವೆ.

ಸಿದ್ಧಾಂತ, ಪ್ರತಿಮೆ, ರಾಜಕಾರಣ ಮತ್ತು ಸಮುದಾಯಗಳ ಅಂತರ್‌ಸಂಬಂಧವು ಬಹುರೂಪಿಯಾಗಿದೆ. ಉದಾ: ಮಂಡ್ಯ ಸೀಮೆಯ ಹಳ್ಳಿಗಳಲ್ಲಿ ಅಂಬೇಡ್ಕರ್ ಗಾಂಧಿಯಿಲ್ಲ. ರೈತಾಪಿ ಕೃತಜ್ಞತೆಯ ಭಾಗವಾಗಿ ನಾಲ್ವಡಿ ಹಾಗೂ ವಿಶ್ವೇಶ್ವರಯ್ಯನವರ ಪ್ರತಿಮೆಗಳಿವೆ. ಭಾರತದಲ್ಲಿ ದೊರೆಯ ದೈವೀಕರಣ ಹೊಸತಲ್ಲ. ವಾಸ್ತುಶಿಲ್ಪಿಯ ದೈವೀಕರಣ ಅಪರೂಪ. ಲಿಂಗಾಯತರು ಹೆಚ್ಚಿರುವ ಉತ್ತರ ಕರ್ನಾಟಕದಲ್ಲಿ ಸಹಜವಾಗಿಯೇ ಬಸವಣ್ಣ ಪ್ರತಿಮೆಗಳಿವೆ. ಕಳೆದೆರಡು ದಶಕಗಳಲ್ಲಿ ಸಮುದಾಯಗಳ ಸಾಮಾಜಿಕ ಎಚ್ಚರ ಮತ್ತು ರಾಜಕೀಯ ಆಶೋತ್ತರಗಳ ಭಾಗವಾಗಿ, ಕನಕದಾಸ, ವಾಲ್ಮೀಕಿ, ಅಂಬಿಗರ ಚೌಡಯ್ಯನವರ ಪ್ರತಿಮೆಗಳು ನಾಡಿನಾದ್ಯಂತ ಸ್ಥಾಪನೆಯಾದವು. ಇವು ಜಾತಿ ಸಮುದಾಯಗಳು ಸಾಂಸ್ಕೃತಿಕ ಅಸ್ಮಿತೆಯ ಮೂಲಕ ಸಂಘಟಿತವಾದ ಚರಿತ್ರೆಯ ಹೆಜ್ಜೆಗುರುತುಗಳು. ಸಮಸ್ಯೆಯೆಂದರೆ, ಜಾತಿಜಗಳ-ಕೋಮು ಗಲಭೆಗಳ ಹೊತ್ತಲ್ಲಿ ಇವು ಎದುರಾಳಿಗಳ ಕೈಗೆ ಸುಲಭದ ತುತ್ತಾಗುವುದು. ದಲಿತ ಹುಡುಗ ಮೇಲ್ಜಾತಿ ಹುಡುಗಿಯನ್ನು ಪ್ರೀತಿಸಿದರೆ ಅಂಬೇಡ್ಕರ್



ಪ್ರತಿಮೆ ಪೆಟ್ಟು ಗ್ಯಾರಂಟಿ ಎನ್ನುವಂತಾಗಿದೆ. ಭಾರತದಲ್ಲಿ ಪ್ರತಿಮೆ-ಬಾವುಟ-ಗೋಪುರಗಳು ನ್ಯಾಯಬದ್ಧ ಪ್ರತಿರೋಧಕ್ಕೆ ಮಾತ್ರವಲ್ಲ, ಜಾತಿಮತದ ಗಲಭೆಗೆ ಹಾರುವ ಕಿಡಿಗಳೂ ಜನಹತ್ಯೆಗೆ ಮುನ್ನುಡಿಗಳೂ ಆಗಿಬಿಟ್ಟಿವೆ.

ಕೆಲವೊಮ್ಮೆ ಪ್ರತಿಮಾನಾಶಕ್ಕೆ ಗಂಭೀರ ಕಾರಣಗಳೇ ಬೇಕಿಲ್ಲ. ಸ್ಥಳೀಯವಾದ ಕೆಲವೊಮ್ಮೆ ಕ್ಷುದ್ರವಾದ ಹಿತಾಸಕ್ತಿಗಳೂ ಸಾಕು. ಶಾಲೆಗೆ ರಜೆ ಘೋಷಿಸುವಂತೆ ಮಾಡಲು ವಿದ್ಯಾರ್ಥಿಯೊಬ್ಬ ಊರಲ್ಲಿದ್ದ ಪ್ರತಿಮೆಯನ್ನು ಅಪಮಾನಿಸಿದ ಪ್ರಸಂಗವೂ ಜರುಗಿದೆ. ಸರ್ಕಾರವನ್ನು ಕೆಳಗಿಳಿಸಲು ಕೋಮುಗಲಭೆ ಮಾಡಿಸುವ ಪ್ರಯೋಗಗಳಂತೂ ಸಾಕಷ್ಟು ನಡೆದಿವೆ. ತರುಣನೊಬ್ಬ ಅಂಬೇಡ್ಕರ್ ಪ್ರತಿಮೆಗೆ ಕುಡಿದ ಅಮಲಿನಲ್ಲಿ ಮದ್ಯವನ್ನೆರಚಿದ ಪ್ರಕರಣವು, ಆತನ ತಾಯಿಯ ಮಂತ್ರಿ ಪದವಿಗೆ ಸಂಚಕಾರ ತಂದಿತು. ಆದರೆ ತಮ್ಮ ರಾಜೀನಾಮೆ ಹಿಂದಿದ್ದುದು ಸ್ವಪಕ್ಷೀಯರ ರಾಜಕೀಯ 'ಷಡ್ಯಂತ್ರ'ವೆಂದು ನಂತರ ಮಂತ್ರಿಗಳು ವಿವರಿಸಿದರು. ಭಾರತದ ಪ್ರಜಾಪ್ರಭುತ್ವದ ಚಹರೆ ರೂಪಿಸುತ್ತಿರುವ ಸಂಗತಿಗಳಲ್ಲಿ ಪ್ರತಿಮಾ ರಾಜಕಾರಣವೂ ಒಂದು. ಪ್ರತಿಮೆಗಳು ಸಮುದಾಯದ ಅಸ್ಮಿತೆಯನ್ನು ಸಾರ್ವಜನಿಕ ಬದುಕಿನಲ್ಲಿ ಪ್ರತಿಷ್ಠಾಪಿಸುವ ಉಪಾಯಗಳು; ಅವುಗಳ ಪ್ರತಿಷ್ಠಾಪನೆ ಮತ್ತು ಕೆಡಿಸುವಿಕೆಗಳು ಶಕ್ತಿರಾಜಕಾರಣಕ್ಕೆ ಆಟಗಳು. ಶಿವಾಜಿಯು ಮರಾಠರ ಅಸ್ಮಿತೆ ಭಾಗವಾಗಿ ರೂಪುಗೊಂಡ ಬಳಿಕ, ಮಹಾರಾಷ್ಟ್ರದ ತುಂಬೆಲ್ಲ ಆತನ ಪ್ರತಿಮೆಗಳು ಸ್ಥಾಪನೆಯಾದವು. ಹೀಗೆಯೇ ಮದಕರಿನಾಯಕ, ಕೆಂಪೇಗೌಡ, ಚೆನ್ನಮ್ಮ ಮೊದಲಾದವರ ಪ್ರತಿಮೆಗಳು. ಪ್ರಭುತ್ವಗಳು ಜನರ ಬದುಕು ಚೇತರಿಸಿಕೊಳ್ಳುವಂತಹ ಯಾವ ಕೆಲಸವನ್ನು ಮಾಡದಿದ್ದರೂ, ಅವರ ಭಾವನೆಗಳನ್ನು ತಣಿಸುವ ಪ್ರತಿಮೆ ಸ್ಥಾಪಿಸಿದರೆ, ಬಾರಾಖೂನ್ ಮಾಫ್.

ಪ್ರತಿಮೆಗಳ ಇನ್ನೊಂದು ರೂಪವಾಗಿರುವ ಚಿತ್ರಪಟಗಳೂ ಶಕ್ತಿ ರಾಜಕಾರಣದ ಪಗಡೆಯಲ್ಲಿ ಕಾಯಿಗಳಾಗಿವೆ. ವಾಜಪೇಯಿ ಸರ್ಕಾರವು ಪಾರ್ಲಿಮೆಂಟಿನಲ್ಲಿ ಗಾಂಧಿ ಪಟದ ನೇರಾ ಎದುರಲ್ಲಿ, ಗೋಡ್ಸೆಯ ಗುರುವಾಗಿದ್ದ ಸಾವರ್ಕರರ ಚಿತ್ರಪಟವನ್ನು ಪ್ರತಿಷ್ಠಾಪಿಸಿತು. ಅದು ಉದಾರವಾದಿ ಹಿಂದೂವಾಗಿ ಹಿಂದುತ್ವಸಿದ್ಧಾಂತ ಮತ್ತು ಹಿಂದೂರಾಷ್ಟ್ರದ ಪರಿಕಲ್ಪನೆ ವಿರೋಧಿಸುತ್ತಿದ್ದ ಗಾಂಧಿಗೆ ಕೊಟ್ಟ ಜವಾಬಿನಂತಿತ್ತು. ಬಿಜೆಪಿಯವರು, ಗಾಂಧಿಯ ಬಗ್ಗೆ ಸೈದ್ಧಾಂತಿಕ ವಿರೋಧವಿದ್ದರೂ, ಧರಣಿ ಕೂರಲು ಅವರ ಪ್ರತಿಮೆಯನ್ನೇ ಆಯ್ದುಕೊಳ್ಳುವರು. ಗಾಂಧಿಯ ಜಪವನ್ನು ಹೆಚ್ಚಾಗಿ ಮಾಡುವ ಕಾಂಗ್ರೆಸ್ಸಿಗರಲ್ಲಿ ಗಾಂಧಿತತ್ವಕ್ಕೆ ವಿರುದ್ಧವಾಗಿರುವವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಪ್ರತಿಮೆಯನ್ನು ಭೌತಿಕವಾಗಿ ಕೆಡಹದೆಯೂ ಅದು ಸಂಕೇತಿಸುವ ತತ್ವವನ್ನು ಅಪ್ರಸ್ತುತಗೊಳಿಸಬಹುದು. ಈ ಪರಿಯ ತಾತ್ವಿಕ ಭಗ್ನತೆ ಬಸವಣ್ಣನವರ ಪ್ರತಿಮೆಗಳ ವಿಷಯದಲ್ಲೂ ಸಂಭವಿಸುತ್ತಿದೆ. ಬಲಪಂಥೀಯ ರಾಜಕಾರಣಕ್ಕೆ ಅಂಬೇಡ್ಕರ್‌ವಾದ ಮತ್ತು ಬಸವತತ್ವಗಳು ತನ್ನ ಚೌಕಟ್ಟಿಗೆ ಒದಗುವುದಿಲ್ಲವೆಂದು ಗೊತ್ತಿದೆ. ಆದರೆ ಸಮುದಾಯಗಳನ್ನು ಒಳಗೊಂಡು ಪಳಗಿಸುವ ಅದರ ರಾಜಕಾರಣವು ಈ ಪ್ರತಿಮೆ-ಚಿತ್ರಪಟಗಳನ್ನು ನಾನಾ ಬಗೆಯಲ್ಲಿ ಒಳಗೊಳ್ಳುತ್ತಲಿದೆ.

ತ್ರಿಪುರ ಬುಡಕಟ್ಟುಗಳ ಪಾಲಿಗೆ ಅಂಬೇಡ್ಕರ್ ಗಾಂಧಿ ವಿವೇಕಾನಂದ ಟಾಗೂರ್, ಈಗ ದೀನದಯಾಳ ಉಪಾಧ್ಯಾಯ, ಶಾಮಪ್ರಸಾದ ಮುಖರ್ಜಿ-ಸಾಂಸ್ಕೃತಿಕವಾಗಿ ಹೊರಗಿನವರೇ. ದಶರಥ್ ದೇಬರ್ಮ ಬಿಟ್ಟರೆ ತ್ರಿಪುರವಾಳಿದ ಬಹುತೇಕ ಮುಖ್ಯಮಂತ್ರಿಗಳೂ ಬಂಗಾಳಿಗಳು. ಹೀಗಾಗಿ ವಿವೇಕಾನಂದ ಟಾಗೂರರ ಪ್ರತಿಮೆಗಳು ಬುಡಕಟ್ಟು ಲೋಕದಲ್ಲಿ ಬಂಗಾಳಿಗಳ ಸಾಂಸ್ಕೃತಿಕ ವಸಾಹತಿನ ವಿಸ್ತರಣೆಯ ಕುರುಹುಗಳಂತೆ ತೋರುತ್ತವೆ. ಆದರೆ ಬಂಗಾಳಿ ಆಳುವವರ್ಗವು ಬುಡಕಟ್ಟಿನ ನಾಯಕರನ್ನೂ ಒಳಗೊಳ್ಳುತ್ತ ಎಚ್ಚರಿಕೆಯ ರಾಜಕೀಯ ಸಮತೋಲನ ಸಾಧಿಸಿದೆ. ಕಮ್ಯುನಿಸ್ಟರು ಪ್ರತ್ಯೇಕವಾದಿ ಬುಡಕಟ್ಟು ಹೋರಾಟಗಳ ಜತೆ ಸಾಕಷ್ಟು ಸೆಣಸಾಡಿ, ಅವರನ್ನು ವಿಶಾಲವಾದ ರಾಜಕೀಯ ಪ್ರಕ್ರಿಯೆಯಲ್ಲಿ ಒಳಪಡಿಸಿದರು. ಸಮುದಾಯ ಅಥವಾ ವರ್ಗಗಳು, ನಿರ್ದಿಷ್ಟ ಸಿದ್ಧಾಂತ/ ಚಿಂತನೆಯನ್ನು ಒಪ್ಪಿಕೊಳ್ಳುವ ಭಾಗವಾಗಿ ಪ್ರತಿಮೆ-ಸಂಕೇತಗಳನ್ನು ತಮ್ಮ ಬದುಕಿನಲ್ಲಿ ನೆಲೆಗೊಳಿಸಿಕೊಳ್ಳುವುದು ಒಂದು ಬಗೆಯಾದರೆ, ಅವು ಆಳುವವರ್ಗಗಳ ಟ್ರೋಜನ್ ಕುದುರೆಗಳಾಗಿ ಬರುವುದು ಇನ್ನೊಂದು ಬಗೆ. ಸ್ಥಳೀಯ ಪ್ರಜ್ಞೆ ತೀವ್ರವಾಗಿರುವ ತಿಪ್ಪೆರಿ ಬುಡಕಟ್ಟುಗಳಿಗೆ ತಮ್ಮನ್ನು 'ಹೊರಗಿನವರು' ಆಳುತ್ತಿರುವ ಬಗ್ಗೆ ಒಳಕುದಿಯಿದ್ದಂತೆ ನನಗೆ ಭಾಸವಾಯಿತು.

ಲೆನಿನ್ ಪ್ರತಿಮೆ ಕೆಡವಿದ ಪ್ರಕರಣದಲ್ಲಿ, ವಿದೇಶಿಗರ ಪ್ರತಿಮೆಗಳೇಕೆ ನಮ್ಮ ದೇಶದಲ್ಲಿರಬೇಕು ಎಂಬ ಪ್ರತಿವಾದವೂ ಮಂಡಿತವಾಯಿತು. ಭಾರತದಲ್ಲಿ ಇಂಗ್ಲೆಂಡಿನ ರಾಣಿ, ಚಕ್ರವರ್ತಿ, ವೈಸರಾಯ್, ಅಧಿಕಾರಿಗಳ ನೂರಾರು ಪ್ರತಿಮೆಗಳಿವೆ. ಅವನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆದು ಮ್ಯೂಸಿಯಂನಲ್ಲಿ ಇಡಬಹುದು. ಆದರೆ ಬ್ರಿಟಿಶರ ಬಳುವಳಿಯಾದ ಭಾಷೆ ಸಂಸ್ಕೃತಿ ಆಧುನಿಕತೆಗಳು ಹಿಂದೂಸ್ತಾನದ ಬಾಳಲ್ಲಿ ನಮ್ಮವಾಗಿ ನೆಲೆಸಿವೆ. ವಿಚಾರಗಳ ಅಸ್ತಿತ್ವಕ್ಕೆ ಶಿಲೆ -ಲೋಹದ ಪ್ರತಿಮೆ ಅನಿವಾರ್ಯವಲ್ಲ. ಪ್ರತಿಮೆಗಳ ಹಂಗಿಲ್ಲದೆಯೂ ಉಗ್ರವಾದಿ ರಾಷ್ಟ್ರೀಯ ಸಿದ್ಧಾಂತಗಳನ್ನು ಹುಟ್ಟುಹಾಕಿದ ಸಿದ್ಧಾಂತಿ /ಸರ್ವಾಧಿಕಾರಿಗಳನ್ನು ಆರಾಧಿಸುವವರು ಭಾರತದಲ್ಲಿದ್ದಾರೆ. ಶೆಲ್ಲಿ ವರ್ಡ್ಸ್‌ವರ್ತ್ ಶೇಕ್ಸಪಿಯರ್ ಪ್ರತಿಮೆಗಳು ಭಾರತದಲ್ಲಿ ಕಡಿಮೆ. ಆದರೆ ವಸಾಹತುಶಾಹಿಯ ಭಾರವನ್ನು ನಮ್ಮ ಮೇಲೆ ಹೇರದ ಈ ಲೇಖಕರನ್ನು ಭಾರತದ ಓದುಗರ ತಮ್ಮೆದೆಯಲ್ಲಿ ಸ್ಥಾಪಿಸಿಕೊಂಡರು. ಕುವೆಂಪು ರಚಿಸಿದ ಲೆನಿನ್, ವರ್ಡ್ಸ್‌ವರ್ತ್ ಕುರಿತ ಕವಿತೆಗಳು ಇದಕ್ಕೆ ಸಾಕ್ಷಿ.

ಪ್ರತಿಮೆಗಳು ರಾಜಕೀಯ ಅಧಿಕಾರ ವಿಸ್ತರಣೆಗಿಂತ ಮಿಗಿಲಾಗಿ ಸಾಂಸ್ಕೃತಿಕ ಸೈದ್ಧಾಂತಿಕ ಗೆಲುವಿನ ಪತಾಕೆಗಳು. ಅವು ಸಮುದಾಯಗಳ ಆಶೋತ್ತರದ ಭಾಗವಾಗಿ ಬರುವುದಕ್ಕಿಂತ, ಗೆದ್ದವರು ಸೋತವರ ಮೇಲೆ ಅಧಿಕಾರ ಚಲಾಯಿಸುವ ಭಾಗವಾಗಿ ಬಂದಿದ್ದೇ ಹೆಚ್ಚು. ಹೈದರಾಬಾದ್ ಕರ್ನಾಟಕದಲ್ಲಿ ನಿಲ್ಲಿಸಲಾದ ಸರ್ದಾರ್ ಪಟೇಲರ ಪ್ರತಿಮೆಗಳಿಗೆ ಭಾರತವನ್ನು ಏಕೀಕರಿಸಿದ ಸ್ಮೃತಿಯಿದೆ. ಆದರೆ ಅದನ್ನು ನಿಲ್ಲಿಸಿದವರಿಗೆ ವಿಭಿನ್ನ ಧಾರ್ಮಿಕ ಸಮುದಾಯ ಮಧ್ಯೆ ವೈಷಮ್ಯ ತರುವ ಇರಾದೆಯೂ ಇದೆ. ಕೆಲವು ಸ್ಥಳಗಳಲ್ಲಿ ಶಿವಾಜಿ, ಮದಕರಿ, ಓಬವ್ವ ಮುಂತಾದವರ ಪುತ್ಥಳಿಗಳನ್ನು, ಚರಿತ್ರೆಯ ನೆನಪು ಕೆರಳಿಸುವ ಗುಪ್ತಾಶಯದಿಂದಲೇ ಸ್ಥಾಪಿಸಿರುವಂತೆ ತೋರುವುದು. ಪ್ರತಿಮೆಗಳು ಸಮಸಮಾಜದ ಕಟ್ಟುವ ಹೋರಾಟದ ಪ್ರತೀಕಗಳಾಗುವಂತೆ, ಆಳುವವರ್ಗಗಳಿಗೆ ನೀರನ್ನು ಕದಡಿ ಮೀನು ಹಿಡಿವ ಕೂಳಿಗಳೂ ಆಗಬಲ್ಲವು.

ಪ್ರತಿಮೆಗಳು ಸಾಧಕರ ಚಿಂತನೆ ಜನಬದುಕಿನ ಭಾಗವಾಗಿರುವ ಸಂಕೇತಗಳೇ ಆಗಿರಬೇಕಿಲ್ಲ. ಸಾಧಕರ ಚಿಂತನೆಯನ್ನು ಕಳೆದುಕೊಂಡ ಸಮಾಜಗಳೇ ಪರಿತಾಪ ರೂಪದಲ್ಲಿ ಪ್ರತಿಮೆಗಳನ್ನು ಸ್ಥಾಪಿಸಬಹುದು. ಗಾಂಧಿ ಜಯಂತಿಯಂದು ಗಾಂಧಿಯವರ ರಾಜಕೀಯ 'ಉತ್ತರಾಧಿಕಾರಿ' ಎನಿಸಿಕೊಂಡವರು ವಿಗ್ರಹಕ್ಕೆ ಮಾಲೆ ಹಾಕುವ ಯಾಂತ್ರಿಕ ಔಪಚಾರಿಕತೆಯನ್ನು ಗಮನಿಸಬೇಕು. ಮೊದಲ ಘಟ್ಟದಲ್ಲಿ ದಲಿತರ ಎಚ್ಚೆತ್ತ ರಾಜಕೀಯ ಪ್ರಜ್ಞೆಯ ಸಂಕೇತವಾಗಿದ್ದ ಅಂಬೇಡ್ಕರ್ ಪ್ರತಿಮೆ, ಪ್ರಭುತ್ವಗಳು ಸಮುದಾಯವನ್ನು ಓಲೈಸುವ ತಂತ್ರವಾಗಿಯೂ, ಮುಗ್ಧರ ಆರಾಧನೆಯ ದೈವವಾಗಿಯೂ ಬದಲಾಗುತ್ತಿವೆ. ಪ್ರತಿಮೆಗಳಿಗೆ ನಿಜವಾದ ಅರ್ಥಬರುವುದು ಅವು ಪ್ರತಿನಿಧಿಸುವ ತತ್ವವನ್ನು ಬದುಕುವುದರಲ್ಲಿ. ಈ ಬದುಕುವಿಕೆ ಪ್ರತಿಮೆಗಳ ಹಂಗಿಲ್ಲದೆಯೂ ಸಾಧ್ಯವಾಗಬೇಕು. ಮಾತ್ರವಲ್ಲ ವಿಮರ್ಶಾತ್ಮಕ ಅನುಸಂಧಾನ ಮೂಲಕ ಅವು ಮರುಹುಟ್ಟು ಪಡೆವಂತೆ ಚಲನಶೀಲವಾಗಿರಬೇಕು. ಅಂಗೈಯಲ್ಲಿ ಲಿಂಗದ ಕುರುಹಿಲ್ಲದೆಯೂ ತನ್ನ ತಾನರಿವ ಸಾಧನೆ ಸಾಧ್ಯವಾಗಬೇಕೆಂದು ಅಲ್ಲಮ ಹೇಳಿದ್ದು ಇದೇ ಅರ್ಥದಲ್ಲಿ. ಅಮೂರ್ತ ತತ್ವಾಚರಣೆಯ ಮಹತ್ವವನ್ನು ಕಸಿದುಕೊಳ್ಳುವ ಶಕ್ತಿ ಮೂರ್ತ ಕುರುಹಿಗೆ ಇರುವುದರಿಂದಲೇ ಝೆನ್ ಬುದ್ಧನ ಪ್ರತಿಮಾರಾಧನೆ ಒಲ್ಲೆಂದಿತು. ಈ ಹಿನ್ನೆಲೆಯಲ್ಲಿ ಬುದ್ಧನ ಕಾಷ್ಠಪ್ರತಿಮೆ ಸುಟ್ಟು ಚಳಿ ಕಾಸಿಕೊಂಡ ಗುರುವಿನ ಕಥೆಯನ್ನಾಗಲಿ, 'ಒಂದೊಮ್ಮೆ ಬುದ್ಧ ಸಿಕ್ಕರೆ ಕೊಲ್ಲಿರಿ' ಎಂಬ ಮಾರ್ಮಿಕಾರ್ಥದ ಹೇಳಿಕೆಯನ್ನಾಗಲಿ ಗಮನಿಸಬೇಕು. ಭಾರತದ ನಿರ್ಗುಣವಾದಿ ಅನುಭಾವಿ ಪಂಥಗಳೆಲ್ಲವೂ ಸಗುಣ ಮೂರ್ತಿಯನ್ನು ನಿರಾಕರಿಸುತ್ತವೆ. ಆದರೆ ತಾಲಿಬಾನಿಗಳು ನಿರ್ಗುಣವಾದಿ ಇಸ್ಲಾಮಿನ ಹೆಸರಲ್ಲಿ ಬಮಿಯಾನ್ ಬುದ್ಧನನ್ನು ಕೆಡವಿದ್ದು ಕೇವಲ ಬರ್ಬರತೆ. ಬುದ್ಧನ ಬೃಹದಾಕಾರದ ಪ್ರತಿಮೆ ಸ್ಥಾಪಿಸುವ ಮ್ಯಾನ್ಮಾರ್-ಶ್ರೀಲಂಕಾಗಳು ತಮ್ಮದೇ ದೇಶದ ಪ್ರಜೆಗಳನ್ನು ಹತ್ಯೆ ಮಾಡಿದ್ದು, ಬುದ್ಧನ ಕರುಣೆ ಅಹಿಂಸೆಯನ್ನು ಕೆಡಹಿದ ಕೃತ್ಯವೇ.

ಪ್ರತಿಮೆ-ಚಿತ್ರಪಟ-ಧ್ವಜ-ಗೋಪುರಗಳು ಮಾನವೀಯ ಆದರ್ಶದ ಸಂಕೇತವಾಗಿದ್ದರೆ, ವಾಸ್ತವಿಕ ಬದುಕಿನಲ್ಲಿ ನಿರಾಳವಾಗಿರುತ್ತವೆ. ಅವು ಸಿದ್ಧಾಂತ ಅಥವಾ ಅಧಿಕಾರಕ್ಕೆ ಸಂಬಂಧಿಸಿದ್ದರೆ, ಅಧಿಕಾರಸ್ಥರು ಬದಲಾದಾಗಲೆಲ್ಲ ದಾಳಿಗೆ ಈಡಾಗುತ್ತವೆ. ರಾಜಕಾರಣಿಗಳು ಅಧಿಕಾರ ಸ್ವೀಕರಿಸಿದ ಕೂಡಲೇ ಕಛೇರಿಯಲ್ಲಿದ್ದ ಹಳೆಯ ಪಟಗಳನ್ನು ಬದಲಿಸುವರು; ರಾಜರು ತಾವು ಗೆದ್ದ ಪ್ರದೇಶದಲ್ಲಿ ಸೋತ ದೊರೆಯ ಧರ್ಮದ ಸಂಕೇತಗಳನ್ನು ಧ್ವಂಸಗೊಳಿಸುತ್ತಿದ್ದರು. ಗಜನಿ-ಘೋರಿಗಳು ಮಾಡಿದ ಪ್ರತಿಮಾ ನಾಶ, ಶೈವ-ವೈಷ್ಣವರು ಪರಸ್ಪರ ಮಾಡಿದ ಪ್ರತಿಮಾ ಭಗ್ನತೆ, ಪೇಶ್ವೆಗಳು ಮೇಲುಕೋಟೆ-ಶೃಂಗೇರಿಗಳಲ್ಲಿ ಮಾಡಿದ ವಿಧ್ವಂಸಗಳು-ಧಾರ್ಮಿಕ ಅಸಹನೆ, ಲೂಟಿತನ ಮತ್ತು ರಾಜಕೀಯ ಮುಯ್ಯಿಯ ಫಲಗಳಾಗಿವೆ. ಕ್ರೈಸ್ತ ದೊರೆಗಳು ರೋಮ್ ಸಾಮ್ರಾಜ್ಯವನ್ನು ವಶಪಡಿಸಿಕೊಂಡಾಗ ಪೇಗನ್ ಎನಿಸಿಕೊಂಡ ಗ್ರೀಕ್/ರೋಮನ್ ದೇವತೆಗಳು ಅಂಗವಿಕಲತೆ ಅನುಭವಿಸಬೇಕಾಯಿತು. ರಾಜಪ್ರಭುತ್ವಗಳಲ್ಲಿ ಇವು ಶೌರ್ಯದ ಕಾರ್ಯಗಳೆಂದೇ ಮಾನ್ಯಗೊಂಡವು. ಆದರೆ ಈ ಭಂಜನಕಾರ್ಯವು ಸೈದ್ಧಾಂತಿಕ-ರಾಜಕೀಯ ವಿರೋಧಗಳನ್ನು ಪ್ರಕಟಿಸಲು ನಾಗರಿಕ ವಿಧಾನಗಳಿರುವ ಪ್ರಜಾಪ್ರಭುತ್ವದಲ್ಲಿ ಸಮರ್ಥನೀಯವಲ್ಲ. ಪ್ರತಿಮಾ ನಾಶವು ಸಿದ್ಧಾಂತ ನಂಬುವವರ ಹತ್ಯೆಯಾಗಿ ವಿಸ್ತರಣೆಗೊಳ್ಳಬಹುದು. ಇಂತಹ ಹತ್ಯೆಗಳು ಸೀಮಿತ ವಲಯದಲ್ಲಿದ್ದ ತತ್ವಸಿದ್ಧಾಂತದ ವ್ಯಾಪಕ ಪ್ರಸರಣಕ್ಕೆ ಚೋದಕ ಆಗಬಹುದು. ಭಗ್ನತೆ ಮತ್ತು ಮೃತ್ಯುಮುಖದಲ್ಲೇ ಮರುಹುಟ್ಟು ಸಂಭವಿಸುವ ನಾಟಕೀಯ ಪರಿಯಿದು..

ಕವಿ ಮನಸು

## ಜಗಕೆ ಮಾದರಿ



ಕೇಳು ನಮ್ಮ ಚಿಂತೆಯನ್ನು
ನಂದನರಸಿ ಯಶೋದೆ
ದೂರು ಕೊಡಲು ಬಂದೆವಿಂದು
ಕೃಷ್ಣನಾಟ ತಾಳದೆ

ಮುದ್ದೆ ಬೆಣ್ಣೆ ಕದ್ದ ಕೃಷ್ಣ
ಅದನು ಮೆದ್ದುದಲ್ಲದೆ
ಮೊಸರು ಗಡಿಗೆ ಒಡೆದನಿಂದು
ಮೊಸರು ಪೂರ್ತಿ ಚೆಲ್ಲಿದೆ

ನಗುವೆಯೇಕೆ ರಾಣಿ ನೀನು
ನಾವು ದೂರು ನೀಡಿರೆ
ಕಳ್ಳ ಕೃಷ್ಣ ಕಾಣನಲ್ಲ
ಹೊರಗೆ ಕರೆಯಬಾರದೆ?

ನಗದೆ ಏನು ಮಾಡಲೀಗ
ಬಲ್ಲೆ ನಿಮ್ಮ ಆಟವ
ಇಂದು ನನ್ನ ಜೊತೆಗೆ ಇರುವ
ಕಾಡಲೆಂತು ಕೇಶವ?

ಅವನ ಕಂಡು ಹೋಗಲೆಂದು
ನೆಪವ ಹಿಡಿದು ಬಂದಿರಿ
ನನ್ನ ಕಂದ ಮುದ್ದು ಕೃಷ್ಣ
ಜಗಕೆ ಅವನು ಮಾದರಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಶ್ರುತಿ ಇಲ್ಲದ ರಾಗ



ಮೈ ಮೇಲೆ ಕನಕ ಹಾಕಿದನಲ್ಲ
ಮನದೊಳಗೆ ಬರಲಿಲ್ಲ
ಬಾಹ್ಯದಲಿ ಬೆಳಕ ಉರಿಸಿದನಲ್ಲ
ಮನದೊಳಗೆ ದೀಪ ಉರಿಸಲಿಲ್ಲ

ಹಚ್ಚಿದ ದೀಪವನು ಆರಿಸಿದನಲ್ಲ
ದೀಪ ಬೆಳಗೋ ಗೊಡವೆ ಅವನಿಗಿಲ್ಲ
ಕತ್ತಲೆಯಲಿ ಬೆತ್ತಲೆ ಮಾಡಿದನಲ್ಲ
ಮನದ ಕತ್ತಲೆಯ ಕಳೆಯಲಿಲ್ಲ

ಏಕಾಂತ ಮಾತ್ರ ಬೇಕೆಂದ ನಲ್ಲ
ಪಿಸುಮಾತಿಗೂ ಅವಕಾಶ ಇಲ್ಲ
ಅವನಿಗೆ ಬೇಕಿರುವುದ ಹುಡುಕಿದನಲ್ಲ
ನನಗೇನು ಬೇಕೆಂಬುದು ಅವ ತಿಳಿಲಿಲ್ಲ

ಏನಿದ್ದರೆ ಏನುಂಟು ಚೆಲುವನೇ
ಕೊಡಲಿಲ್ಲ ನಿನ್ನ ಹೃದಯವನ್ನೇ
ಶರೀರವೆರಡು ಸೇರಿದರೆ ಏನಂತೆ
ಶ್ರುತಿ ಇಲ್ಲದಾ ರಾಗ ನುಡಿಸಿದಂತೆ

– ಕೆ ಎಂ ಬಸವರಾಜ ಹೊಸಪೇಟೆ

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ, ಮೊಬೈಲ್ ಓದು ಉಚಿತ, ಕಣ್ಣಿಗೆ ಹಾನಿ ಖಚಿತ!

ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ
ಬೆಲೆ ರೂ 2

# ಕಲಿಯುಗದ ಕಲ್ಪವೃಕ್ಷ ಶ್ರೀ ರಾಘವೇಂದ್ರ ಸ್ವಾಮಿ

## ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ! ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೇ!!

ದೇವರೆಂದರೆ ತಿರುಪತಿ ತಿಮ್ಮಪ್ಪ, ಗುರುಗಳೆಂದರೆ ಮಂಚಾಲೆ ರಾಗಪ್ಪ ಇದು ಪ್ರಸಿದ್ಧವಾದ ನಾಣ್ಣುಡಿ. ಈ ನಾಣ್ಣುಡಿ ಸತ್ಯವೆಂಬುದಕ್ಕೆ ರಾಯರ ಕೃಪಾಶೀರ್ವಾದವೇ ಸಾಕ್ಷಿ. ಕೋಟ್ಯಾಂತರ ಭಕ್ತರ ಕಷ್ಟಕಾರ್ಪಣ್ಯವನ್ನು ನೀಗಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳು ಅಕ್ಷರಶಃ ದೈವಾಂಶ ಸಂಭೂತರು. ಇವರು ಶ್ರೀ ಮಧ್ವಾಚಾರ್ಯರ ದ್ವೈತ ತತ್ವವನ್ನು ಪ್ರತಿಪಾದಿಸುತ್ತಿದ್ದ ಹದಿನಾರನೇ ಶತಮಾನದ ಪ್ರಮುಖ ಸಂತರು. ಸತ್ಯ ಮತ್ತು ಧರ್ಮ ಪರಿಪಾಲನೆಗೆ ಜೀವಂತ ಉದಾಹರಣೆ ಶ್ರೀ ರಾಘವೇಂದ್ರ ಸ್ವಾಮಿಗಳು. ಬೇಡಿದವರ ಭವಭೂತಿಯನ್ನು ಪರಿಹರಿಸುವ ರಾಯರನ್ನು ಭಕ್ತರು "ಕಲಿಯುಗದ ಕಲ್ಪವೃಕ್ಷ" ಎಂದೇ ಕರೆಯುತ್ತಾರೆ.

ಶ್ರೀ ರಾಘವೇಂದ್ರ ಸ್ವಾಮಿಗಳು ವೆಂಕಟನಾಥರಾಗಿ ಶ್ರೀ ತಿಮ್ಮಣ್ಣ ಭಟ್ಟ ಮತ್ತು ಶ್ರೀಮತಿ ಗೋಪಿಕಾಂಬರವರ ಎರಡನೇ ಪುತ್ರರಾಗಿ 1595ರಲ್ಲಿ ಇಂದಿನ ತಮಿಳುನಾಡಿನ ಚಿದಂಬರಂ ಬಳಿಯ ಭುವನಗಿರಿಯಲ್ಲಿ ಜನಿಸಿದರು. ಇವರಿಗೆ ಚಿಕ್ಕ ವಯಸ್ಸಿನಿಂದಲೇ ದೇವರ ಮೇಲೆ ಅಪಾರ ಭಕ್ತಿಯಿತ್ತು. ದೇವರಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ತನ್ನ ತಂದೆಯ ಬಳಿ ಕೇಳುತ್ತಿದ್ದರು. ವೆಂಕಟನಾಥರು ತಮ್ಮ ಆರಂಭಿಕ ಶಿಕ್ಷಣವನ್ನು ಮಧುರೈನಲ್ಲಿರುವ ತನ್ನ ಸೋದರ ಮಾವ ಲಕ್ಷ್ಮಿನರಸಿಂಹಾಚಾರ್ಯ ಅವರಿಂದ ಪಡೆದುಕೊಂಡರು.

ಮಧುರೈನಿಂದ ಹಿಂತಿರುಗಿದ ಮೇಲೆ ವೆಂಕಟನಾಥರು ಸರಸ್ವತಿ ಬಾಯಿ ಯವರನ್ನು ವಿವಾಹವಾದರು .ಅವರು ಲಕ್ಷ್ಮೀನಾರಾಯಣ ಆಚಾರ್ಯ ಎಂಬ ಮಗನನ್ನು ಪಡೆದರು. ವಿವಾಹದ ನಂತರವೂ ವೆಂಕಟನಾಥರು ಕುಂಭಕೋಣಂ ನಲ್ಲಿ ಶ್ರೀ ಸುಧೀಂದ್ರ ತೀರ್ಥರ ಬಳಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ದ್ವೈತ ವೇದಾಂತ, ವ್ಯಾಕರಣ ಮತ್ತು ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದರು. ಹಲವಾರು ಚರ್ಚೆಗಳಲ್ಲಿ ಪಾಲ್ಗೊಂಡು ತನಗಿಂತ ಉನ್ನತ ಮಟ್ಟದ ವಿದ್ವಾಂಸರನ್ನೆಲ್ಲ ಸೋಲಿಸಿದರು. ಇವರ ಅಪಾರಜ್ಞಾನವನ್ನು ಅರಿತ ಗುರು ಸುಧೀಂದ್ರತೀರ್ಥರು ಇವರಿಗೆ "ಮಹಾಭಾಷ್ಯ ವೆಂಕಟನಾಥಾಚಾರ್ಯ" ಎಂಬ ಬಿರುದನ್ನು ನೀಡಿದರು. ಇವರು ಮೂಲ ರಾಮ ಹಾಗೂ ಶ್ರೀ ಪಂಚಮುಖ ಪ್ರಾಣ ದೇವರನ್ನು ಆರಾಧಿಸುತ್ತಿದ್ದರು. ಮಕ್ಕಳಿಗೆ ಸಂಸ್ಕೃತ ಹಾಗೂ ಪ್ರಾಚೀನ ವೈದಿಕ ಪಾಠಗಳನ್ನು ಮಾಡುತ್ತಿದ್ದರು. ಶ್ರೀ ರಾಘವೇಂದ್ರ ಸ್ವಾಮಿಯವರು ಪೂರ್ವಾಶ್ರಮದಲ್ಲೂ, ಅವರ ಉಪಸ್ಥಿತಿಯಲ್ಲೂ ಹಾಗೂ ಅನುಪಸ್ಥಿತಿಯಲ್ಲೂ ಅನೇಕ ಪವಾಡಗಳನ್ನು ಮಾಡಿದ್ದಾರೆ.

### ಪೂರ್ವಾಶ್ರಮದ ಪವಾಡ

ಒಮ್ಮೆ ವೆಂಕಟನಾಥರು ಪತ್ನಿಯೊಂದಿಗೆ ಕುಂಭಕೋಣಂ ಪ್ರವಾಸ ಮಾಡುತ್ತಿದ್ದಾಗ ಇವರನ್ನು ಮತ್ತು ಇವರ ಪತ್ನಿಯನ್ನು ಸಮಾರಂಭ ಒಂದರಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿತ್ತು. ಆಹ್ವಾನಿಸಿದವರು ಇವರನ್ನು ತಮ್ಮ ಮನೆಯ ಕೆಲಸದವರಂತೆ ನಡೆಸಿಕೊಂಡರು. ಅವರು ಏರು ಧ್ವನಿಯಲ್ಲಿ ವೆಂಕಟನಾಥರಿಗೆ ಶ್ರೀಗಂಧವನ್ನು ಗಂಧದ ಒರಲಿನಿಂದ ತೇಯುವಂತೆ ಆದೇಶಿಸಿದರು. ವೆಂಕಟನಾಥರು ಅಗ್ನಿಸೂಕ್ತವನ್ನು ಪಠಿಸುತ್ತಾ ಶ್ರೀಗಂಧವನ್ನು ತೇಯ್ದರು. ಈ ತೇಯ್ದ ಗಂಧವನ್ನು ಹಚ್ಚಿಕೊಂಡವರಿಗೆ ಮೈಯೆಲ್ಲಾ ಬೆಂಕಿಯಿಂದ ಸುಟ್ಟಂತೆ ಉರಿಯಲು ಶುರುವಾಯಿತು. ಅವರಿಗೆ ವೆಂಕಟನಾಥರ ಮಹಿಮೆ,ಶಕ್ತಿ ಮತ್ತು ಭಕ್ತಿಯ ಬಗ್ಗೆ ಅರಿವಾಗಿ ಕ್ಷಮೆಯನ್ನು ಯಾಚಿಸಿದರು.ನಂತರ ವೆಂಕಟನಾಥರು ವರುಣದೇವನ ಮಂತ್ರವನ್ನು ಜಪಿಸುತ್ತಾ ಮತ್ತೆ ಗಂಧವನ್ನು ತೇಯ್ದು ಕೊಟ್ಟರು ಅದನ್ನು ಮೈಗೆ ಲೇಪಿಸಿಕೊಂಡ ಮೇಲೆ ಅವರಿಗೆಲ್ಲ ಮಳೆ ನೀರು ತಂಪೆರಗಿದ ಅನುಭವವಾಯಿತು.


ಹೀಗೆ ವೆಂಕಟನಾಥರ ಜೀವನ ದೇವರ ಆರಾಧನೆ ಆಧ್ಯಾತ್ಮಿಕ ಹಾಗೂ ಮಾನವೀಯ ಸೇವೆಯಲ್ಲಿಯೇ ಸಾಗುತ್ತಿತ್ತು. ಹೀಗಿರುವಾಗ ಇವರ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರ ಕನಸಿನಲ್ಲಿ ದೇವರು ವೆಂಕಟನಾಥನೇ ಮಠಕ್ಕೆ ಮುಂದಿನ ಉತ್ತರಾಧಿಕಾರಿಯಾಗಲು ಸೂಕ್ತ ವ್ಯಕ್ತಿ ಎಂದು ಸೂಚನೆ ನೀಡಿದರು. ಮೊದಲು ವೆಂಕಟನಾಥರು ಮಡದಿ ಹಾಗೂ ಮಗನ ಜವಾಬ್ದಾರಿ ಇರುವುದರಿಂದ ಸನ್ಯಾಸತ್ವ ಸ್ವೀಕರಿಸಲು ಒಪ್ಪಲಿಲ್ಲ. ನಂತರ ಅವರ ಕನಸಿನಲ್ಲಿ ವಿದ್ಯಾಲಕ್ಷ್ಮಿ ಸೂಚನೆ ನೀಡಿದ್ದರಿಂದ ಸನ್ಯಾಸತ್ವ ದೀಕ್ಷೆಯನ್ನು ಸ್ವೀಕರಿಸಿದರು.



### ರಾಯರ ಮಹಿಮೆ

ಒಮ್ಮೆ ತಾಂಜಾವೂರು ಜಿಲ್ಲೆಯ ಕುಂಭಕೋಣದಲ್ಲಿ 12 ವರ್ಷಗಳ ಕಾಲ ನಿರಂತರ ಬರಗಾಲ ಸಂಭವಿಸಿತ್ತು. ಆ ಪ್ರದೇಶದ ರಾಜನು ಶ್ರೀ ರಾಘವೇಂದ್ರ ಸ್ವಾಮಿಗಳ ಮೊರೆ ಹೋದನು. ಅವರು ಯಜ್ಞಗಳನ್ನು ಮಾಡಿ ಮಳೆ ದೇವರನ್ನು ಆಹ್ವಾನಿಸುವಂತೆ ಸೂಚಿಸಿದರು. ಅದರ ಪ್ರಕಾರ ಆಧ್ಯಾತ್ಮಿಕ ವಿಧಿ ವಿಧಾನವನ್ನು ನೆರವೇರಿಸಿದ ತಕ್ಷಣ ಮಳೆಯೂ ಸುರಿದು ಬರಗಾಲ ನೀಗಿ ಆ ಪ್ರದೇಶವು ಅಭಿವೃದ್ಧಿಯಾಗ ತೊಡಗಿತು. ಇದರಿಂದ ಸಂತೃಪ್ತನಾದ ರಾಜ ಮಠಕ್ಕೆ ತೆರಳಿ ರಾಘವೇಂದ್ರ ಸ್ವಾಮಿಗಳಿಗೆ ರತ್ನದ ಹಾರವನ್ನು ಉಡುಗೊರೆಯಾಗಿ ನೀಡಿದನು. ರಾಘವೇಂದ್ರ ಸ್ವಾಮಿಗಳು ಇದನ್ನು ಅಗ್ನಿ ಕುಂಡಕ್ಕೆ ಹಾಕಿದರು. ಇದರಿಂದ ರಾಜನು ಸಿಟ್ಟಾದನು. ಇದನ್ನು ಗುರುತಿಸಿದ ಸ್ವಾಮಿಗಳು ಅಗ್ನಿಕುಂಡಕ್ಕೆ ಕೈ ಹಾಕಿ ಹಾರವನ್ನು ತೆಗೆದರು. ಆ ಹಾರಕ್ಕಾಗಲಿ ಅಥವಾ ಅವರ ಕೈಗಾಗಲಿ ಏನು ಹಾನಿಯಾಗಿರಲಿಲ್ಲ. ಸ್ವಾಮೀಜಿಯವರ ಶಕ್ತಿಯನ್ನು ನೋಡಿ ರಾಜನು ಬೆರಗಾಗಿ ರಾಘವೇಂದ್ರ ಸ್ವಾಮಿಗಳ ಭಕ್ತನಾದನು

ಶ್ರೀ ರಾಘವೇಂದ್ರ ಸ್ವಾಮಿಗಳು ಪ್ರವಾಸದಲ್ಲಿದ್ದಾಗ ಕುರುಬನೊಬ್ಬನಿಗೆ ಆಶೀರ್ವದಿಸಿ ಕಷ್ಟ ಸಮಯದಲ್ಲಿ ತನ್ನನ್ನು ಸ್ಮರಿಸುವಂತೆ ಹೇಳಿದ್ದರು. ಈ ಕುರುಬನು ತನ್ನ ಕುರಿಯನ್ನು ಮೇಯಿಸುತ್ತಿದ್ದಾಗ ಅದೋನಿಯ ನವಾಬನು ತನ್ನ ಕುದುರೆಯ ಮೇಲೆ ಸವಾರಿ ಮಾಡುತ್ತಾ ಬಂದನು. ಅವನಿಗೆ ರಾಯಭಾರಿ ಒಬ್ಬನು ಪತ್ರವನ್ನು ತಂದು ಕೊಟ್ಟನು. ಅದು ಸ್ಥಳೀಯ ಭಾಷೆಯಲ್ಲಿದ್ದುದರಿಂದ ಅವನಿಗೆ ಅದನ್ನು ಓದಲಾಗಲಿಲ್ಲ. ಅಲ್ಲಿಯೇ ಕುರಿ ಮೇಯಿಸುತ್ತಿದ್ದ ಈ ಕುರುಬನನ್ನು ಕರೆದು ಪತ್ರ ಓದುವಂತೆ ಆದೇಶಿಸಿದನು. ಈ ಕುರುಬನು ನಾನು ಅನಕ್ಷರಸ್ಥ ನನಗೆ ಒದಲಿಕ್ಕಾಗಲಿ ಬರೆಯುವುದಕ್ಕಾಗಲಿ ಬರುವುದಿಲ್ಲವೆಂದು ಪರಿಪರಿಯಾಗಿ ಬೇಡಿಕೊಂಡರೂ ಅದನ್ನು ಕೇಳದೆ ನವಾಬನು ನನ್ನ ಆಜ್ಞೆಯನ್ನು ಮೀರಿದರೆ ನಿನ್ನ ಪ್ರಾಣವನ್ನು ತೆಗೆಯುವುತ್ತೇನೆ ಎಂದು ಹೆದರಿಸಿದನು. ಆ ಕುರುಬನು ರಾಘವೇಂದ್ರ ಸ್ವಾಮಿಗಳನ್ನು ಪ್ರಾರ್ಥಿಸಿ ಪತ್ರವನ್ನು ತೆಗೆದುಕೊಂಡು ನಿರರ್ಗಳವಾಗಿ ಓದಿದನು.



ಚೇತನ ಭಾರ್ಗವ
ಲೇಖಕಿ

Scan For Digital Colourful
HAMPI TIMES E-paper

ಈ ಕುರುಬನಿಂದ ಅದೋನಿಯ ನವಾಬನಿಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಬಗ್ಗೆ ತಿಳಿಯಿತು. ಒಮ್ಮೆ ನವಾಬನಿಗೆ ಸ್ವಾಮಿಗಳ ಖುದ್ದಾಗಿ ಭೇಟಿ ಮಾಡುವ ಅವಕಾಶ ಸಿಕ್ಕಿತು. ಅವನು ಸ್ವಾಮಿಗಳಿಗೆ ಗೌರವ ಸಲ್ಲಿಸುವ ಬದಲು ತನ್ನ ದುಷ್ಟಬುದ್ಧಿ ಇಂದ ಸ್ವಾಮಿಗಳ ಆಧ್ಯಾತ್ಮಿಕ ಶಕ್ತಿಯನ್ನು ಪರೀಕ್ಷಿಸಲು ಮುಂದಾದನು. ಅವರಿಗೆ ಅರ್ಪಿಸಲು ಹಣ್ಣುಗಳನ್ನು ಇಡುವ ಬದಲು ತಟ್ಟೆಯಲ್ಲಿ ಮಾಂಸದ ತುಂಡುಗಳನ್ನು ಇಟ್ಟು ಅದರ ಮೇಲೆ ಬಟ್ಟೆಯಿಂದ ಮುಚ್ಚಿ ಸೇವಿಸುವಂತೆ ಕೋರಿದನು. ಅದಕ್ಕೆ ಸ್ವಾಮೀಜಿ ತಮ್ಮ ಕಮಂಡಲದಿಂದ ಪವಿತ್ರ ನೀರನ್ನು ಪ್ರೋಕ್ಷಿಸಿ ನಂತರ ತಟ್ಟೆಯನ್ನು ತೆರೆಯಲು ಸೂಚಿಸಿದರು. ಅದರಲ್ಲಿ ಮಾಂಸದ ತುಂಡುಗಳು ಮಾಯವಾಗಿ ತಟ್ಟೆಯು ಹಣ್ಣುಗಳಿಂದ ತುಂಬಿತ್ತು. ಈ ಪವಾಡಕ್ಕೆ ಮೂಕ ವಿಸ್ಮಿತನಾದ ನವಾಬನು ಕ್ಷಮೆಯನ್ನು ಯಾಚಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತನಾದನು.

ರಾಘವೇಂದ್ರ ಸ್ವಾಮಿಗಳು ಈ ಪವಿತ್ರ ಕಮಂಡಲದ ನೀರನ್ನು ಪ್ರೋಕ್ಷಿಸಿ ತಮ್ಮ ಪೂರ್ವಾಶ್ರಮದ ಮಡದಿಯ ಆತ್ಮಕ್ಕೆ ಜನನ ಮರಣಗಳ ಚಕ್ರದಿಂದ ಮೋಕ್ಷವನ್ನು ಪ್ರಾಪ್ತಿಸಿದ್ದರು.

1671ರಲ್ಲಿ ಶ್ರಾವಣ ಮಾಸದ ಕೃಷ್ಣ ಪಕ್ಷದ ದ್ವಿತೀಯ ದಿನದಂದು ಶ್ರೀ ರಾಘವೇಂದ್ರ ಸ್ವಾಮಿಗಳು ಜೀವಂತ ಸಮಾಧಿಯಾದರು. ಈ ದಿನವನ್ನು ಪ್ರತಿವರ್ಷ ಭಕ್ತರು ರಾಘವೇಂದ್ರ ಸ್ವಾಮಿಗಳ ಆರಾಧನೆ ಎಂದು ಆಚರಿಸುತ್ತಾರೆ.

ಶ್ರೀ ರಾಘವೇಂದ್ರ ಸ್ವಾಮಿಯವರು ಪ್ರಣವ ಮಂತ್ರವನ್ನು ಪಠಿಸುತ್ತ ಗಾಢವಾದ ಧ್ಯಾನದಲ್ಲಿ ಕಳೆದು ಹೋದರು. ಅವರ ಕೈಯಲ್ಲಿದ್ದ ಜಪ ಮಾಲೆ ನಿಶ್ಚಯವಾಯಿತು. ಆ ಚಿಹ್ನೆಯನ್ನು ಅರ್ಥ ಮಾಡಿಕೊಂಡ ಶಿಷ್ಯ ವೃಂದದವರು ಅವರ ಸುತ್ತಲೂ ಚಪ್ಪಡಿಗಳನ್ನು ಜೋಡಿಸಲಾರಂಬಿಸಿದರು. ಅವರ ತಲೆಯವರೆಗೂ ಚಪ್ಪಡಿಗಳನ್ನು ಜೋಡಿಸಿದರು. ನಂತರ ಸ್ವಾಮಿಗಳು ಹಿಂದೆ ಸೂಚಿಸಿದಂತೆ 1200 ಸಾಲಿಗ್ರಾಮವನ್ನು ಒಳಗೊಂಡ ತಾಮ್ರದ ಪೆಟ್ಟಿಗೆಯನ್ನು ಇರಿಸಿದರು. ಅದರ ಮೇಲೆ ಚಪ್ಪಡಿ ಹಾಕಿ ಮಣ್ಣು ತುಂಬಿ ಬೃಂದಾವನವನ್ನು ನಿರ್ಮಿಸಿದರು. ನಂತರ ಈ ಬೃಂದಾವನಕ್ಕೆ 12 ಸಾವಿರ ವರಾಹಗಳಿಂದ ಅಭಿಷೇಕವನ್ನು ಮಾಡಿದರು.

ಅಪ್ಪಣ್ಣಚಾರ್ಯರು ರಾಘವೇಂದ್ರ ಸ್ವಾಮಿಗಳ ಪ್ರಿಯ ಶಿಷ್ಯರಾಗಿದ್ದರು. ಇವರು ಸ್ವಾಮಿಗಳು ಬೃಂದಾವನವನ್ನು ಪ್ರವೇಶಿಸುವ ಸಂದರ್ಭದಲ್ಲಿ ತುಂಗಾಭದ್ರ ನದಿಯ ಇನ್ನೊಂದು ದಡದಲ್ಲಿದ್ದರು. ಆ ಸಮಯದಲ್ಲಿ ತುಂಗಾ ನದಿಯಲ್ಲಿ ಪ್ರವಾಹ ಉಂಟಾಗಿತ್ತು. ಅಪ್ಪಣ್ಣ ಆಚಾರ್ಯರು ಶ್ರೀ ಪೂರ್ಣಭೋಧ ಸ್ತೋತ್ರವನ್ನು ರಚಿಸುತ್ತಾ ಪಠಿಸುತ್ತಿದ್ದರು. ಆಗ ತುಂಗೆ ಶಾಂತಳಾದಳು. ಅವರು ನದಿಯನ್ನು ದಾಟಿದರು. ಆ ಸಮಯದಲ್ಲಾಗಲೇ ಸ್ವಾಮಿಗಳು ಬೃಂದಾವನವನ್ನು ಪ್ರವೇಶಿಸಿ ಬಿಟ್ಟಿದ್ದರು. ಆ ದುಃಖದಲ್ಲಿ ಅಪ್ಪಣ್ಣಚಾರ್ಯರಿಗೆ ತಾವು ರಚಿಸುತ್ತಿದ್ದ ಸ್ತೋತ್ರವನ್ನು ಮುಗಿಸಲು ಸಾಧ್ಯವಾಗಲಿಲ್ಲ. ಕೊನೆಯ ಏಳು ಅಕ್ಷರಗಳು ಉಳಿದಿತ್ತು. ಬೃಂದಾವನದ ಒಳಗಿನಿಂದ ಆ ಏಳು ಅಕ್ಷರಗಳು "ಸಕ್ಷೀ ಹಯಸ್ತೋತ್ರ ಹೀ"ಎಂಬ ಧ್ವನಿ ಕೇಳಿಸಿತು. ಇದು ಅಪ್ಪಣ್ಣಚಾರ್ಯರ ಶ್ರೀ ಪೂರ್ಣ ಬೋಧ ಸ್ತೋತ್ರಕ್ಕೆ ಸ್ವಾಮಿಗಳ ಒಪ್ಪಿಗೆ ಇದೆ ಎಂಬುದಕ್ಕೆ ಸಾಕ್ಷಿಯಾಯಿತು. ಶ್ರೀ ರಾಘವೇಂದ್ರ ಸ್ವಾಮಿಗಳು ಬೃಂದಾವನ ಪ್ರವೇಶಿಸಿದ ನಂತರ ಅವರು ತೋರಿದ ಮೊದಲ ಪವಾಡ ಇದಾಗಿತ್ತು.

1820 ರಲ್ಲಿ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ನಡೆಯುತ್ತಿದ್ದ ಸಂದರ್ಭದಲ್ಲಿ ಮಂತ್ರಾಲಯ ಪ್ರದೇಶದ ಅಧಿಕಾರಿಯಾಗಿದ್ದ ಥಾಮಸ್ ಮುನ್ರೋ ಮಂತ್ರಾಲಯ ಮಠಕ್ಕೆ ಹಿಂದಿನ ರಾಜರು ನೀಡಿದ್ದ ಭೂಮಿ ಬಗ್ಗೆ ಪರಿಶೀಲನೆ ನಡೆಸಲು ಮಠಕ್ಕೆ ಭೇಟಿ ನೀಡಿದರು. ಆ ಸಮಯದಲ್ಲಿ ಮುನ್ರೋ ಬೃಂದಾವನವನ್ನು ಪ್ರವೇಶಿಸಿದಾಗ ಸ್ವಾಮಿಗಳು ಅವರಿಗೆ ಮಾತ್ರ ಕಾಣಿಸಿಕೊಂಡು ಕಾಗದ ಪತ್ರಗಳನ್ನು ತೋರಿಸಿ ನಿಮಗೆ ಕೆಲಸದಲ್ಲಿ ಬಡ್ತಿ ದೊರೆಯುವುದೆಂದು ಆಶೀರ್ವದಿಸಿ ಮಂತ್ರಾಕ್ಷತೆಯನ್ನು ನೀಡಿದರು. ಮುನ್ರೋ ಕಣ್ಣಿಗೆ ಕಾಣದವರೊಂದಿಗೆ ಮಾತನಾಡಿದ್ದು ಹಾಗೂ ಅವರ ಕೈಯಲ್ಲಿದ್ದ ಮಂತ್ರಾಕ್ಷತೆಯನ್ನು ಸುತ್ತಮುತ್ತಲಿನ ಜನರು ನೋಡಿ ರಾಯರ ಪವಾಡಕ್ಕೆ ಮಂತ್ರ ಮುಗ್ಧರಾಗಿ ನಮನ ಸಲ್ಲಿಸಿದರು


ಇಂದಿಗೂ ತುಂಗಭದ್ರಾ ತೀರದಲ್ಲಿರುವ ಮಂತ್ರಾಲಯ ದಲ್ಲಿ ಬೃಂದಾವನದಲ್ಲಿ ನೆಲೆಗೊಂಡು ಭಕ್ತರ ಕಷ್ಟ ಕೋಟಲೆ ಪರಿಹರಿಸುವ ರಾಘವೇಂದ್ರ ಸ್ವಾಮಿಗಳ ನಾಮ ಸ್ತುತಿಯೇ ಭಕ್ತರಿಗೆ ಶ್ರೀರಕ್ಷೆ . ಏನೇ ಆಗಲಿ ರಾಯರಿದ್ದಾರೆ ಎಲ್ಲದನ್ನೂ ನೋಡಿಕೊಳ್ಳುತ್ತಾರೆ ಎಂಬ ಭರವಸೆ ಯಿಂದ ಬಾಳುವ ಲಕ್ಷಾಂತರ ಭಕ್ತ ಗಣದ ಆರಾಧ್ಯದೈವ ರಾಘವೇಂದ್ರ ಸ್ವಾಮಿಗಳು ಎಲ್ಲರ ಹೃನ್ಮನಗಳನ್ನು ಬೆಳಗುವರಾಗಿದ್ದಾರೆ. ಅವರ ಆರಾಧ ನಾ ಮಹೋತ್ಸವದಲ್ಲಿ ಪಾಲ್ಗೊಂಡು ನಾವೆಲ್ಲ ಕೃತಾರ್ಥರಾಗೋಣ.

# ಕಳ್ಳ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ಶೋಷಣೆಯ ಬಲಿಪಶುಗಳ ಯೋಜನೆ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಜಿಲ್ಲಾ ಪೋಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣ ಘಟಕ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕೊಪ್ಪಳ ಇವರ ಸಂಯುಕ್ತಾಶ್ರದಲ್ಲಿ ಬುಧವಾರದಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕೊಪ್ಪಳದಲ್ಲಿ ರಾಷ್ಟ್ರೀಯ ಕಾನೂನು ಪ್ರಾಧಿಕಾರದಿಂದ ಅನುಷ್ಠಾನದಲ್ಲಿರುವ ಕಳ್ಳ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ಶೋಷಣೆಯ ಬಲಿಪಶುಗಳ ಯೋಜನೆ-2015ರ ಕುರಿತು ಜಾಗೃತಿ ಕಾರ್ಯಕ್ರಮ ನೆಡೆಯಿತು.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಸಂಗಪ್ಪ ದರಗದ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಭಾರತ ದೇಶದಲ್ಲಿ ಸ್ವತಂತ್ರ್ಯ ಸಿಕ್ಕು 78ವರ್ಷಗಳಾದರೂ ಸಹ ಹೆಣ್ಣುಮಕ್ಕಳಿಗೆ ಯಾವುದೇ ರೀತಿ ರಕ್ಷಣೆ ಇಲ್ಲ. ಬಡತನ ಸ್ಥಿತಿಯಲ್ಲಿರುವ ಕುಟುಂಬಗಳನ್ನು ದುಡ್ಡಿನ ಆಶೆ ತೋರಿಸಿ ಮಕ್ಕಳನ್ನು ಸಾಗಾಣಿಕೆ ಮಾಡುತ್ತಾರೆ ಇದಕ್ಕಾಗಿ ಎಲ್ಲಾರೂ ತಮ್ಮ ತಮ್ಮ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಶರಣಬಸವ ಸಜ್ಜನ್, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಶಿವಾನಂದ, ಕೊಪ್ಪಳ ಉಪ ವಿಭಾಗದ ಪೋಲೀಸ್ ಉಪಾಧೀಕ್ಷಕರಾದ ಮುತ್ತಣ್ಣ ಸರವಗೋಳ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ವಕೀಲ ಹನುಮಂತ ರಾವ್ ಕೆ ಲ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಇತರರು ಪಾಲ್ಗೊಂಡಿದ್ದರು.

# ವಿವಿಧೆಡೆ ದಾಳಿಯಿಂದ ಇಬ್ಬರ ಬಾಲಕಾರ್ಮಿಕ ಮಕ್ಕಳ ರಕ್ಷಣೆ

■ ಹಂಪಿ ಟೈಮ್ ಬಳ್ಳಾರಿ

ಕಾರ್ಮಿಕ ಇಲಾಖೆ ವತಿಯಿಂದ ಸಿರುಗುಪ್ಪ ಪಟ್ಟಣದ ಬಳ್ಳಾರಿ ರಸ್ತೆ, ಆದೋನಿ ರಸ್ತೆ, ಸಿಂಧನೂರು ರಸ್ತೆ, ದೇಶನೂರು ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿರುವ ಮಂತಾದ ಸ್ಥಳಗಳಲ್ಲಿರುವ ಗ್ಯಾರೇಜ್, ಬೇಕರಿ, ಹೋಟೆಲ್, ಮೆಕ್ಯಾನಿಕ್ ಶಾಪ್, ಕಿರಾಣಿ ಅಂಗಡಿ ಇತ್ಯಾದಿ ಉದ್ದಿಮೆಗಳ ಮೇಲೆ ಆಕಸ್ಮಿಕ ದಾಳಿ ಮಾಡಿ 02 ಬಾಲಕಾರ್ಮಿಕ ಹಾಗೂ ಕಿಶೋರಕಾರ್ಮಿಕ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳನ್ನು ಮುಖ್ಯವಾಹಿನಿ ತರಲು ಶಾಲೆಗಳಿಗೆ ಮರು ದಾಖಲಿಸಲಾಗಿದೆ ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಮೌನೇಶ್ ಅವರು ತಿಳಿಸಿದ್ದಾರೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಾರ್ಮಿಕ ಇಲಾಖೆ, ಪೋಲಿಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣ ಘಟಕ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಚೈಲ್ಡ್‌ಲೈನ್ ಸಹಯೋಗದೊಂದಿಗೆ ನಗರದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ರಡಿಯಲ್ಲಿ ನೇಮಕವಾದ ನಿರೀಕ್ಷಕರ ಟಾಸ್ಕ್ ಪೋರ್ಸ್ ಸಮಿತಿ ಸಭೆ ನಡೆಸಿ ದಾಳಿ ಮಾಡಲಾಗಿದೆ.

ಈ ಟಾಸ್ಕ್ ಪೋರ್ಸ್ ಸಮಿತಿಯಲ್ಲಿ ಸಿರುಗುಪ್ಪ ಉಪ ತಹಶೀಲ್ದಾರ ರಾಘವೇಂದ್ರ, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಮಹಾಂತೇಶ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ ಬಿ.ಉಮೇಶ್, ಕಾರ್ಮಿಕ ನಿರೀಕ್ಷಕ ತಿರುಮಲೇಶ್, ಜಿಲ್ಲಾ ಬಾಲಕಾರ್ಮಿಕ ಯೋಜನೆ ಸಿಬ್ಬಂದಿ ಯು.ಶ್ರೀನಿವಾಸುಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಸಿಬ್ಬಂದಿ ಸುಭಾಷ್ ಚಂದ್ರ, ಚೈಲ್ಡ್‌ಲೈನ್ ಸಿಬ್ಬಂದಿ ಚಂದ್ರಕಳ ಸೇರಿದಂತೆ ಕಂದಾಯ ಇಲಾಖೆ, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**22–08–2024 – ಗುರುವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಭಾದ್ರಪದ |
| ಯೋಗ | : ಧೃತಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:06:58 |
| ಸೂರ್ಯಾಸ್ತ | : 18:52:06 |
| ರಾಹು ಕಾಲ | : 14:05–15:41 |
| ಯಮಘಂಡ ಕಾಲ | : 06:07–07:43 |
| ಗುಳಿಕ ಕಾಲ | : 09:18–10:54 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 21–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.70 ಅಡಿ |
| ಒಳ ಹರಿವು | 30893 ಕ್ಯುಸೆಕ್ |
| ಹೊರ ಹರಿವು | 8658 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 78.803 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1627.3 ಅಡಿ |
| ಒಳ ಹರಿವು | 874 ಕ್ಯುಸೆಕ್ |
| ಹೊರ ಹರಿವು | 10270 ಕ್ಯುಸೆಕ್ |
| ಸಾಮರ್ಥ್ಯ | 84.269 ಟಿಎಂಸಿ |

# ಆತ್ಮ ವಿಶ್ವಾಸ ಜೊತೆಗೆ ಅಭ್ಯಾಸವಿರಲಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಕರೆ । ಒಂದು ದಿನದ ಕಾರ್ಯಾಗಾರ





■ ಹಂಪಿ ಟೈಮ್ಸ್ ಬಳ್ಳಾರಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರು ನಡೆಸುತ್ತಿರುವವರು ತಮ್ಮ ಆತ್ಮ ವಿಶ್ವಾಸದ ಜೊತೆಗೆ ನಿರಂತರ ಅಭ್ಯಾಸ ನಡೆಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಯುವಸಮೂಹಕ್ಕೆ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅನುದಾನದಡಿ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶದ ನಿರುದ್ಯೋಗಿ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆವುಳ್ಳ ಯುವಕ–ಯುವತಿಯರಿಗಾಗಿ ಕೆಎಎಸ್, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳ ಪೂರ್ವ ತರಬೇತಿ ಆಯ್ಕೆಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ "ಒಂದು ದಿನದ ಕಾರ್ಯಾಗಾರ" ಉದ್ಘಾಟಿಸಿ ಅವರು ಮಾತನಾಡಿದರು.

ನಿರಂತರ ಅಭ್ಯಾಸ ಮತ್ತು ಪ್ರಯತ್ನಗಳಿಂದ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ. ಅಡ್ಡಮಾರ್ಗಗಳಿಂದ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಶಾಶ್ವತ ಯಶಸ್ಸು ದೊರಕದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಪ್ರಸ್ತುತ ಇದು ಸ್ಪರ್ಧಾತ್ಮಕ ಯುಗವಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸುವ ಇಚ್ಛಾಶಕ್ತಿ ತೋರಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ಪದವಿ ಹಂತದ ವಿದ್ಯಾಭ್ಯಾಸದ ಜೊತೆಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬೇಕು ಎಂದರು.

ಶ್ರದ್ಧೆ–ಏಕಾಗ್ರತೆಯಿಂದ ಅಧ್ಯಯನ ನಡೆಸಬೇಕು. ನಿರ್ದಿಷ್ಟ ಗುರಿ ನಿಗದಿ ಮಾಡಿಕೊಂಡು ಸಮಾಜದ ಉನ್ನತ ಸ್ಥಾನ ಅಲಂಕರಿಸಲು ಶ್ರಮವಹಿಸಬೇಕು ಎಂದು ಅಭ್ಯರ್ಥಿಗಳಿಗೆ ಕಿವಿ ಮಾತು ಹೇಳಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಗೊಳ್ಳುತ್ತಿರುವ ವಿದ್ಯಾರ್ಥಿಗಳು ಯೋಜನೆ ರೂಪಿತ ದಿನಚರಿ ಸಿದ್ಧಪಡಿಸಿಕೊಂಡು ವೇಳೆಯ ಪ್ರಕಾರ ಅಭ್ಯಾಸ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಯುಪಿಎಸ್‌ಸಿ ಪರೀಕ್ಷೆಗೆ ಕನ್ನಡ ಭಾಷೆ ಯಲ್ಲಿಯೂ ಸಹ ಪಠ್ಯಕ್ರಮ ದೊರೆಯಲಿದ್ದು, ಉತ್ತಮ ಮಾರ್ಗದರ್ಶಕರ ದಾರಿಯಲ್ಲಿ ಅಭ್ಯಾಸ ನಿರತರಾಗಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಅವರು ಮಾತನಾಡಿ, ಸ್ಪರ್ಧಾ ಅಭ್ಯರ್ಥಿಗಳು ಯಾವುದೇ ಅಡೆತಡೆಗಳಿಗೆ ಕಿವಿಗೊಡದೇ ಪರೀಕ್ಷಾ ತಯಾರಿ ನಡೆಸಿ, ಸಾಧನೆಯ ಶಿಖರ ಏರಬೇಕು ಎಂದು ಧೈರ್ಯ ತುಂಬಿದರು.

ಐಎಎಸ್, ಐಪಿಎಸ್‌ನಂತಹ ಉದ್ಯೋಗಾಂಕ್ಷಿಗಳು ಕೌಟುಂಬಿಕ ಕಾರಣಗಳಿಗೆ ಎದೆಗುಂದದೆ, ಸತತ ಪರಿಶ್ರಮದಿಂದ ಯಶಸ್ಸು ಕಾಣಬೇಕು ಎಂದು ತಿಳಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾಮತ್ತುಜಿಪಂನಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು, ವಿದ್ಯಾರ್ಥಿಗಳೊಡನೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಂವಾದ ನಡೆಸಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಪಂ ಯೋಜನಾ ನಿರ್ದೇಶಕ ವಾಗೀಶ್ ಶಿವಾಚಾರ್ಯ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಹಟ್ಟಪ್ಪ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ವ್ಯವಸ್ಥಾಪಕ ಪ್ರಾಣೇಶ್, ಸಿಬ್ಬಂದಿಗಳಾದ ರಾಜು, ದುಂಡೇಶ್ ಸೇರಿದಂತೆ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ನೋಂದಣಿ ಮಾಹಿತಿ:** ಒಟ್ಟು 125 ಅಭ್ಯರ್ಥಿಗಳಿಗೆ ಕೆಎಎಸ್, ಎಫ್‌ಡಿಎ ಮತ್ತು ಎಸ್‌ಡಿಎ ಪರೀಕ್ಷೆಗಳ ಸಿದ್ಧತೆಗಾಗಿ 05 ತಿಂಗಳ ಉಚಿತ ತರಬೇತಿ ನೀಡಲಾಗುತ್ತದೆ. ಅಭ್ಯರ್ಥಿ ಗಳನ್ನು ಲಿಖಿತ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸಲು https://ballari.nic.in ವೆಬ್‌ಸೈಟ್‌ಗೆ ನೀಡಬೇಕು. ಅರ್ಜಿ ಸಲ್ಲಿಸಲು ಆ.29 ಕೊನೆಯದಿನವಾಗಿದೆ.

# ದೇವರಾಜ್ ಅರಸುರವರ ಸಿದ್ಧಾಂತ ಸಮಾಜಕ್ಕೆ ಮಾದರಿ

## ಅಧ್ಯಕ್ಷ ಗದ್ದಿಕೆರೆ ಎಚ್.ದೊಡ್ಡಬಸಪ್ಪ ಅಭಿಪ್ರಾಯ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು ಅವರು ರಾಜ್ಯ ಕಂಡ ಅಪರೂಪದ ವ್ಯಕ್ತಿ ಮತ್ತು ಅವರದೆ ಸಿದ್ಧಾಂತ ಸಮಾಜಕ್ಕೆ ಮಾದರಿಯಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗದ್ದಿಕೆರೆ ಎಚ್. ದೊಡ್ಡಬಸಪ್ಪ ಅವರು ಅಭಿಪ್ರಾಯ ಪಟ್ಟರು.

ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ದೇವರಾಜ್ ಅರಸು ಹಿಂದುಳಿದ ವರ್ಗಗಳ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜರುಗಿದ ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು ಅವರ 109ನೇ ಜಯಂತಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಅವರ ಸಿದ್ಧಾಂತವೇ ಇಂದು ಸಮಾಜದಲ್ಲಿ ಹಿಂದುಳಿದವರ್ಗದವರಿಗೆ ಸೌಲಭ್ಯಗಳು ಸಿಗುತ್ತಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಆರ್.ಕವಿತಾ ಮಾತನಾಡಿ, ದೇವರಜ್ ಅರಸು ಅವರು, ರೈತರ ಮಕ್ಕಳು, ಹಿಂದುಳಿದ ವರ್ಗದವರ ಮಕ್ಕಳಿಗೆ ಉತ್ತಮ ಮತ್ತು ಉಚಿತ ಶಿಕ್ಷಣ ದೊರೆಯಬೇಕು ಎನ್ನುವ ನಿಟ್ಟಿನಲ್ಲಿ, ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅವುಳನ್ನು ಸದುಪಯೋಗ ಪಡಿಸಿಕೊಳ್ಳಿ, ಮೊಬೈಲ್‌ಗಳಿಂದ ಸಮಾಜ ಕಲುಷಿತವಾಗಬಾರದು. ಅದರಿಂದ ದೂರವಿರಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗಂ.ಭೀ.ಸರ್ಕಾರಿ ಪ.ಪೂ.ಕಾಲೇಜ್‌ನ ಪ್ರಾಂಶುಪಾಲರಾದ ದುರುಗಪ್ಪರವರು ಉಪನ್ಯಾನ ನೀಡಿ, ಇಂದಿನ ಶಿಕ್ಷಣ ಸರ್ಕಾರದ ಸೌಲಭ್ಯಗಳು ಸಾಕಷ್ಟು ಇವೆ. ಆದರೆ, ವಿದ್ಯಾರ್ಥಿಗಳಲ್ಲಿ ಕಲಿಕೆಯ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ದೇವರಾಜ್ ಅರಸು ಅವರ ಕನಸು ನನಸಾಗಬೇಕಾದರೆ. ಸಾಧನೆ ಮಾಡಿ ಎಂದರು. ತಾ.ಪಂ.ಇಒ ಡಾ.ಪರಮೇಶ್ವರಪ್ಪ, ಡಿ.ದೇವರಾಜ್ ಅರಸು ಹಿಂದುಳಿದ ಇಲಾಖೆಯ ನಿರ್ದೇಶಕರಾದ ಎಂ.ರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ವೇದಿಕೆಯಲ್ಲಿ ಅತಿ ಹೆಚ್ಚು ಅಂಕಪಡೆದ ತಾಲೂಕಿನ ಬಿಸಿಎಂ ಹಾಸ್ಟಲ್ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಕಹಳೆ ಬಸವರಾಜ, ಮುಖಂಡ ಎಚ್.ಲೋಕಪ್ಪ, ನರೇಗಾ ನಿರ್ದೇಶಕ ರಮೇಶ್ ಮಹಾಲಿಂಗಪುರ, ಸಿಬಂದಿಗಳಾದ ಮಹಾಂತೇಶ್ ಹಾಗೂ ವಾರ್ಡನ್‌ಗಳು ಇದ್ದರು. ಅಧಿಕಾರಿ ವೀಣಾ ಮತ್ತು ವಾರ್ಡನ್ ಬಸವರಾಜ್ ನಿರ್ವಹಿಸಿದರು.

# ವಿವಿಯಲ್ಲಿ ಬಂಜಾರ ಪೀಠ ಆರಂಭ

## ಕುಲಪತಿ ಪ್ರೊ.ಮುನಿರಾಜು ಹೇಳಿಕೆ । ಬಂಜಾರ ಸಾಹಿತ್ಯ ಮತ್ತು ಬದುಕು ಕಾರ್ಯಕ್ರಮ



■ ಹಂಪಿ ಟೈಮ್ಸ್ ಬಳ್ಳಾರಿ

ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಲಂಬಾಣಿ ಕಲೆಗಳನ್ನು ಮುಖ್ಯವಾಹಿನಿಗೆ ಪರಿಚಯಿಸಲು ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದಲ್ಲಿ ಬಂಜಾರ ಅಧ್ಯಯನ ಪೀಠ ಆರಂಭಿಸಲಾಗುವುದು ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ. ಮುನಿರಾಜು ಅವರು ಹೇಳಿದರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವ ರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಬೆಂಗಳೂರು ಹಾಗೂ ವಿಶ್ವವಿದ್ಯಾಲಯದ ಇಂಗ್ಲೀಷ್, ಕನ್ನಡ ಮತ್ತು ಪ್ರದರ್ಶನ ಕಲಾ ನಾಟಕ ಅಧ್ಯಯನ ವಿಭಾಗಗಳ ಸಂಯುಕ್ತಾ ಶ್ರಯದಲ್ಲಿ ಬುಧವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ "ಬಂಜಾರ ಸಾಹಿತ್ಯ ಮತ್ತು ಬದುಕು" ಎಂಬ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕುಲಸಚಿವ ಎಸ್.ಎನ್.ರುದ್ರೇಶ್ ಅವರು ಮಾತನಾಡಿ, ಬುಡಕಟ್ಟು ಜನಾಂಗಗಳ ಸಂಸ್ಕೃತಿ, ಉಪಸಂಸ್ಕೃತಿಗಳ ಪೋಷಣೆಗಾಗಿ ನಾವು ಶ್ರಮಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಭಾಗದ ಡಾ.ಸೋಮಶೇಖರ ಮಾತನಾಡಿ, ಲಂಬಾಣಿ ಜನಾಂಗದಲ್ಲಿ ಮದುವೆ ಶಾಸ್ತ್ರಗಳು ವಿಶಿಷ್ಟವಾಗಿವೆ. ಬುಡ ಕಟ್ಟುಗಳಲ್ಲಿ ಮುಖ್ಯ ಸಂಸ್ಕೃತಿಯ ಅಡಿ ಉಪ ಸಂಸ್ಕೃತಿಗಳು ಹುಟ್ಟಿಕೊಂಡಿವೆ ಅವು ಗಳನ್ನು ಸಂರಕ್ಷಿಸುವುದು ಇಂದಿನ ಅಗತ್ಯತೆ ಎಂದರು.

ಕಲಾನಿಕಾಯದ ಡೀನ್ ಹಾಗೂ ಮುಖ್ಯಸ್ಥ ಪ್ರೊ.ಎಸ್.ಶಾಂತನಾಯ್ಕ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಬಂಧ ಮಂಡಿಸಲಿದ್ದ ಡಾ.ಲಕ್ಷಣ ನಾಯ್ಕ್ ಬೆಳಗಲ್ಲು, ಸುರೇಶ ನಾಯ್ಕ್, ಮೀಟ್ಯಾನಾಯ್ಕ್.ಎಲ್ ಸೇರಿದಂತೆ ಡಾ.ಕೆ.ಎಸ್.ಶಿವಪ್ರಕಾಶ, ಡಾ.ರಂಗನಾಥ್ ಹಾಗೂ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಫ್ಯಾಶನ್ ಡಿಸೈನ್ ಕೋರ್ಸ್ ವಿದ್ಯಾರ್ಥಿಗಳ ಬೀಳ್ಕೊಡುಗೆ



■ ಹಂಪಿ ಟೈಮ್ಸ್ ಬಳ್ಳಾರಿ

ಇಲ್ಲಿನ ಸಿದ್ಧ ಉಡುಪು ಸಂಶೋಧನೆ ತರಬೇತಿ ವಿನ್ಯಾಸ ಮತ್ತು ಅಭಿವೃದ್ಧಿ ಕೇಂದ್ರದ ಬಿ.ಎಸ್ಸಿ (ಗಾರ್ಮೆಂಟ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ) ವೃತ್ತಿಪರ ಪದವಿ ಕೋರ್ಸ್‌ನ ಅಂತಿಮ ವಿದ್ಯಾರ್ಥಿಗಳಿಗೆ ಮಂಗಳವಾರ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಕಾಲೇಜಿನ ಪ್ರಾಚಾರ್ಯರಾದ ಅಜಿತ್ ಜಿ.ನಾಯಕ್ ಅವರು ಮಾತನಾಡಿ, ಈ ಕಾಲೇಜಿನಲ್ಲಿ ಬಿ.ಎಸ್ಸಿ (ಗಾರ್ಮೆಂಟ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ) ಪದವಿ ಕೋರ್ಸ್ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳು ನಡೆಯುತಿದ್ದು, ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ರಾಜ್ಯದ ಸರ್ಕಾರಿ ಹಾಗೂ ಖಾಸಗಿ ವಲಯದ ಪ್ರತಿಷ್ಠಿತ ಗಾರ್ಮೆಂಟ್ಸ್ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ ಮತ್ತು ಸ್ವಂತ ಉದ್ದಿಮೆದಾರರಾಗಿದ್ದಾರೆ ಎಂದರು.

ಬಿ.ಎಸ್ಸಿ (ಗಾರ್ಮೆಂಟ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ) ವೃತ್ತಿಪರ ಪದವಿ ಕೋರ್ಸ್‌ಗೆ ಪ್ರವೇಶಾತಿಗೆ ಯಾವುದೇ ದ್ವಿತೀಯ ಪಿ.ಯು.ಸಿ (ಕಲೆ, ವಾಣಿಜ್ಯ, ವಿಜ್ಞಾನ, ಶಿಕ್ಷಣ) ವಿಭಾಗದಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ಅರ್ಹರಾಗಿದ್ದು, ಪ್ರವೇಶ ಪಡೆಯಬಹುದು ಎಂದರು.

ಕಾಲೇಜಿನ ಬೋಧಕ ಸಿಬ್ಬಂಧಿಗಳು ಹಾಗೂ ಎಲ್ಲಾ ಬಿ.ಎಸ್ಸಿ (ಗಾರ್ಮೆಂಟ್ ಮ್ಯಾನು ಫ್ಯಾಕ್ಚರಿಂಗ್ ಟೆಕ್ನಾಲಜಿ) ಪದವಿ ಕೋರ್ಸ್‌ನ ವಿದ್ಯಾಥಿಗಳು ಇದ್ದರು.

# ಮರಾಠ ಸಮುದಾಯ ಅಭಿವೃದ್ಧಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.ಒಂದು ಬಾರಿ ನಿಗಮದ ಯಾವುದಾದರು ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಮರಾಠ ಸಮುದಾಯ ಅರ್ಜಿದಾರರು ಸೇವಾಸಿಂಧು ಪೋರ್ಟಲ್‌ನಲ್ಲಿ ಗ್ರಾಮಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಗಳ ಮೂಲಕ ಆನ್‌ಲೈನಲ್ಲಿ ಮತ್ತು ಸ್ವಾತಂತ್ರ ಅಮೃತ ಮುನ್ನಡೆ ಯೋಜನೆಗೆ ಅರ್ಜಿಯನ್ನು ಕೌಶಲ್ಯ ಕರ್ನಾಟಕ ತಂತ್ರಾಶ https://www.kaushalkar.com ಮೂಲಕ ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬೇಕಾಗಿದೆ.

ಹೆಚ್ಚಿನ ಮಾಹಿತಿಗಾಗಿ ಯೋಜನೆಯ ಅರ್ಹತೆ, ಮತ್ತು ಸಲ್ಲಿಸುವ ದಾಖಲಾತಿಗಳ ಕುರಿತು ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದ ಜಾಲತಾಣ https://kmcdc.karnataka.gov.inಗೆ ಮತ್ತು ಅಥವಾ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ವೀರನಗೌಡ ಕಾಲೋನಿ, ಶ್ರೀ ಕುಮಾರಸ್ವಾಮಿ ಗುಡಿ ಎದುರು, ಕ್ಲಬ್ ರೋಡ್ ಬಳ್ಳಾರಿ ದೂರವಾಣಿ ಸಂಖ್ಯೆ :08392–267038ನ್ನು ಸಂಪರ್ಕಿಸಿ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## "There's a Girl by the Tracks! "

**Read the following extracts and answer the questions that follow:-**

**1. There is a girl by the tracks!" the voices cried out.**
a. Who is the girl mentioned here?
Roma
b. Whose voices were these?
Passengers in the opposite train.
c. Why did the voices cry out?
They saw Roma falling from the train by the tracks.

**2. "Let's go and help her."**
a. Who shouted like this? Baleshwar.
b. What happened there?
There was a girl by the tracks who was hurt badly.
c. Why did not the speaker get help?
People of Mumbai were afraid of getting trapped by the police or court..

**3. "I hope I'm not too late."**
a. Who is the 'I' here? Baleshwar.
b. Where was he not late to?
He was not late to the tracks where Roma had fallen.
c. What hope did he have?
He could help Roma who was hurt badly.

**4. "Behanji, aap theek hai?"**
he asked.But there was no response, and no help in sight.
a. Who does 'behanji' refer to here?
'Behanji' refers to Roma.
b. Why was there no response?
Roma was injured seriously and fell beside the tracks unconsciously.
c. Where was she?
She was by the tracks.

**5. "My sister is injured, Please help me take her to a hospital."But no one stopped.**
a. Who does 'sister' refer to here?
"Sister' refers to Roma.
b. Who requested like this to whom? Baleshwar requested like this to motorists.
C. Why was she taken to a hospital? What had happened to her?
She was hurt badly and was unconscious due to the fall.

**6. "Take the girl to Airoli," suggested the cop, "there's a hospital there."But Baleshwar disagreed.**
a. Who is the 'girl' here?
Roma
b. What had happened to her?
She was injured badly.
C. Why did Baleshwar disagree?
Airoli was 10 kms away. Roma needed treatment urgently.

**7. "What's your name? Whom can I call?"**
A) Who asked this question to whom?
Baleshwar asked this question to Roma.
b. Where was she?
In the back of the truck..
c. Do you think these questions were relevanat that time? Why?
Yes, he was relevantly asked these questions because he wanted to inform about her condition.

**8. "Chacha, can I borrow your mobile?"**
a. Who wanted the mobile?
Baleshwar
b. Who did he want to borrow from?
The tempo truck driver.
C. Why did he want the mobile?
To inform Roma's brother, Dinesh about her accident.

**9. "Oh, I couldn't thank him," Baleshwar thought."**
A) Who do the words I and him refer to here?
The word 'I' refers Baleshwar and the word 'you' refers to the tempo-truck driver.
B) Why should he thank him?
He helped Baleshwar to take Roma to the hospital and he did all the necessary help to rescue Roma.
C) Why couldn't he thank him
He slipped from the hospital having done all he could.

**10. "I can't imagine what would have happened if Baleshwar hadn't been there."**
a. Who does 'I' refer to here?
Roma
b. Why was Baleshwar there?
Baleshwar was there to help Roma.
C. What would have happened if Baleshwar Mishra had not been there?
She would have bled to death by the tracks alone.

**11. "I think it's astonishing that a stranger would jump off a train and risk his life for me. I can never repay Baleshwar."**
a. Who is the stranger here?
Baleshwar Mishra
b. What was astonishing for the speaker?
The stranger Baleshwar Jumped off a moving train and risked his life for the speaker
.C. Why couldn't she repay him?
He had done a great deed. He saved her life from dying.

www.hampitimes.com - Hampi Times Margadarshi

Prepared by **Guru Hiremath,** English language teacher S. G. S. High School, Kadalabalu, Hagaribommanahalli

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055